ಸಂಪುಟ : 8 ಸಂಚಿಕೆ : 142 ಪುಟ : 4 ಬೆಲೆ : 3.00 ಶುಕ್ರವಾರ ಜುಲೈ 07, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 142 Pages : 4 Price : 3.00 Friday July 07, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಡಾ. ಬಾಬು ಜಗಜೀವನ್‌ರಾಮ್ ಪ್ರತಿಮೆಗೆ ಬಸವರಾಜ್ ಹೊರಟ್ಟಿ ಗೌರವ ಸಮರ್ಪಣೆ



■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಹಸಿರು ಕ್ರಾಂತಿಯ ಹರಿಕಾರ, ರಾಷ್ಟ್ರ ನಾಯಕ, ಭಾರತದ ಮಾಜಿ ಉಪ ಪ್ರಧಾನ ಮಂತ್ರಿಗಳಾದ ಡಾ.ಬಾಬು ಜಗಜೀವನ್ ರಾಮ್‌ರ 37ನೇ ಪುಣ್ಯಸ್ಮರಣೆ ಅಂಗವಾಗಿ ವಿಧಾನಸೌಧ ಪಶ್ಚಿಮ ದ್ವಾರದ ಬಳಿ ಇರುವ ಡಾ. ಬಾಬು ಜಗಜೀವನ್ ರಾಮ್‌ರ ಪ್ರತಿಮೆಗೆ ಸಭಾಪತಿ ಬಸವರಾಜ್ ಹೊರಟ್ಟಿ ಅವರು ಮಾಲಾರ್ಪಣೆ ಮಾಡುವ ಮೂಲಕ ಗೌರವ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಹೊರಟ್ಟಿಯವರು, 'ದೇಶದ ಪ್ರಗತಿಯಲ್ಲಿ ನಮ್ಮ ಪ್ರಗತಿಯಿದೆ. ಅದರ ಉದ್ಧಾರದಲ್ಲೇ ನಮ್ಮ ಉದ್ಧಾರವಿದೆ. ಅದರ ವಿಮೋಚನೆಯಲ್ಲೇ ನಮ್ಮ ವಿಮೋಚನೆ ಇದೆ' ಎಂಬ ಅವರ ಚಿಂತನೆಗಳನ್ನು ನಾವೆಲ್ಲ ಪಾಲಿಸುವುದು ಅವಶ್ಯವಿದೆ ಎಂದರು. ಈ ಸಂದರ್ಭದಲ್ಲಿ ಸಭಾಪತಿಗಳ ವಿಶೇಷ ಅಧಿಕಾರಿಗಳಾದ ಶೈಲಾ ಕೆ ಡಿ, ವಿಶೇಷ ಕರ್ತವ್ಯಾಧಿಕಾರಿ ಡಾ. ಮಹೇಶ್ ವಾಳ್ವೇಕರ್ ಮುಂತಾದವರು ಉಪಸ್ಥಿತರಿದ್ದರು.

## ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ವಿಜಯಸಾಕ್ಷಿ ಸುದ್ದಿ, ಗದಗ

2022-23ನೇ ಸಾಲಿನಲ್ಲಿ ಹಿಂದುಳಿದ ಹಾಗೂ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ ಮೆಟ್ರಿಕ್ ನಂತರ ವಿದ್ಯಾರ್ಥಿ ವೇತನ, ಶುಲ್ಕ ಮರುಪಾವತಿ, ವಿದ್ಯಾಸಿರಿ-ಊಟ ಮತ್ತು ವಸತಿ ಸಹಾಯ ವಿದ್ಯಾರ್ಥಿವೇತನ ಯೋಜನೆ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ಜುಲೈ 15 ರವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

## ಹೊಸ ನ್ಯಾಯ ಬೆಲೆ ಅಂಗಡಿ ಮಂಜೂರಿಗೆ ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ಗಜೇಂದ್ರಗಡ ತಾಲೂಕು ನರೇಗಲ್ ಪಟ್ಟಣದ ಸಿ.ಎ. ದಿಂಡೂರು ನ್ಯಾಯಬೆಲೆ ಅಂಗಡಿ ಸಂಖ್ಯೆ-82 ನೇದ್ದನ್ನು ರದ್ದು ಮಾಡಲಾಗಿದ್ದು, ಸದರಿ ನ್ಯಾಯಬೆಲೆ ಅಂಗಡಿಯ ಸ್ಥಳಕ್ಕೆ ಹೊಸ ನ್ಯಾಯ ಬೆಲೆ ಅಂಗಡಿ ಮಂಜೂರಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಅಗಸ್ಟ 3 ಕೊನೆಯ ದಿನವಾಗಿದ್ದು ಅರ್ಜಿಯನ್ನು ಗಜೇಂದ್ರಗಡ ತಹಸೀಲ್ದಾರರ ಕಚೇರಿಯಲ್ಲಿ ಸಲ್ಲಿಸಬಹುದಾಗಿದೆ.

ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ತಹಸೀಲ್ದಾರ ಕಚೇರಿ ಅಥವಾ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

## ಸಂಚಾರಿ ಚಲನ್ ಪ್ರಕರಣಗಳಿಗೆ ದಂಡದ ಮೊತ್ತದಲ್ಲಿ ರಿಯಾಯಿತಿ

■ವಿಜಯಸಾಕ್ಷಿ ಸುದ್ದಿ, ಗದಗ

ಜುಲೈ 8ರಂದು ಜರುಗಲಿರುವ ರಾಷ್ಟ್ರೀಯ ಲೋಕ ಅದಾಲತ್ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ ದಿ.5-7-2023ರ ನಡಾವಳಿ ಮೇರೆಗೆ ಸಂಚಾರಿ ಚಲನ್(ಟ್ರಾಫಿಕ್ ಕೇಸ್) ಮೂಲಕ ವಿಧಿಸಿದ ದಂಡದಲ್ಲಿ ಶೇ.50ರಷ್ಟು ರಿಯಾಯಿತಿ ನೀಡಿ ಆದೇಶಿಸಿದೆ. ದಿ.11-2-2023ರೊಳಗೆ ದಾಖಲಾದ ಪ್ರಕರಣಗಳಿಗೆ ಮಾತ್ರ ಅನ್ವಯವಾಗುವಂತೆ ಶೇ.50ರಷ್ಟು ರಿಯಾಯಿತಿ ಅವಕಾಶ ಕಲ್ಪಿಸಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

## ಶಾಲಾ ಕಾಲೇಜು ವಿದ್ಯಾರ್ಥಿಗಳ ಗಮನಕ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿನ ಶೈಕ್ಷಣಿಕ ಅವಧಿಯಲ್ಲಿ ಹೊಸದಾಗಿ ಶಾಲಾ/ಕಾಲೇಜು ಪ್ರವೇಶಾತಿ ಪಡೆದ 01ರಿಂದ 12ನೇ (ಪಿ.ಯು.ಸಿ) ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಸೇವಾಸಿಂಧು ಮುಖೇನ ಅರ್ಜಿ ಸಲ್ಲಿಕೆಯನ್ನು ಜೂನ್ 12ರಿಂದ ಪ್ರಾರಂಭಿಸಿದ್ದು, ಬಸ್ ಪಾಸ್ ಪಡೆಯಲು ಸಾಕಷ್ಟು ಕಾಲಾವಕಾಶ ಕಲ್ಪಿಸಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸೇವಾಸಿಂಧು ಮುಖಾಂತರ ಸಲ್ಲಿಸಲಾದ ಅರ್ಜಿ ಸ್ವೀಕೃತಿ ಹಾಗೂ ಫೋಟೋ ಹೊಂದಿರುವ ಯಾವುದಾದರೂ ಅಧಿಕೃತ ಗುರುತಿನ ಚೀಟಿಯನ್ನು ತೋರಿಸಿ ನಿಗದಿತ ಮಾರ್ಗದ ನಿರ್ದಿಷ್ಟ ಸೇವೆಯಲ್ಲಿ ಜುಲೈ 10 ರವರೆಗೆ ಮಾತ್ರ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿದೆ.

ವಿದ್ಯಾರ್ಥಿಗಳಿಗೆ ನೀಡಲಾದ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳುವುದರೊಂದಿಗೆ, ನೀಡಲಾದ ಕಾಲಾವಧಿಯಲ್ಲಿ ಸಂಸ್ಥೆಯ ಬಸ್ ಪಾಸ್ ಪಡೆಯುವಂತೆ ಹಾಗೂ ನಂತರದ ಅವಧಿಯಲ್ಲಿ ಪಾಸ್ ಇಲ್ಲದೇ ಇರುವ ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಕೆಯಾದ ನಿರ್ದಿಷ್ಟ ಮಾರ್ಗದಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶವಿರುವುದಿಲ್ಲ ಎಂದು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಮುಖ್ಯ ಸಂಚಾರ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

## ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ಗಜೇಂದ್ರಗಡ ತಾಲೂಕು ಕಳಕಾಪುರ ಗ್ರಾಮದಲ್ಲಿ ಹೊಸ ನ್ಯಾಯ ಬೆಲೆ ಅಂಗಡಿ ಮಂಜೂರಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಅಗಸ್ಟ 3 ಕೊನೆಯ ದಿನವಾಗಿದ್ದು, ಅರ್ಜಿಯನ್ನು ಗಜೇಂದ್ರಗಡ ತಹಸೀಲ್ದಾರರ ಕಚೇರಿಯಲ್ಲಿ ಸಲ್ಲಿಸಬಹುದಾಗಿದೆ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ತಹಸೀಲ್ದಾರ ಕಚೇರಿ ಅಥವಾ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

### ಉದ್ಯೋಗ ಖಾತ್ರಿ ಯೋಜನೆಯ ವಿಶೇಷ ಸಭೆಯಲ್ಲಿ ಎಡಿಪಿಸಿ ಕಿರಣಕುಮಾರ ಎಸ್ ಎಚ್

# ಯೋಜನೆಯ ಸದ್ಬಳಕೆಯಲ್ಲಿ ಎಲ್ಲರ ಸಹಭಾಗಿತ್ವ ಅಗತ್ಯ





■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಉದ್ಯೋಗ ಖಾತ್ರಿ ಯೋಜನೆಯು ಗ್ರಾಮೀಣ ಮಹಿಳೆಯರ ಜೀವನವನ್ನು ಹಸನಾಗಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದೆ. ಉದ್ಯೋಗ ಖಾತ್ರಿ ಯೋಜನೆಯ ಸದ್ಬಳಕೆಯಲ್ಲಿ ಎಲ್ಲರ ಸಹಭಾಗಿತ್ವ, ಸಹಕಾರ ಅತ್ಯಗತ್ಯವಾಗಿದೆ ಎಂದು ಎಡಿಪಿಸಿ ಕಿರಣಕುಮಾರ ಎಸ್ ಎಚ್ ಹೇಳಿದರು.

ಅವರು ತಾಲೂಕಿನ ಮಾಢಳ್ಳಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಹಮ್ಮಿಕೊಂಡ ಉದ್ಯೋಗ ಖಾತ್ರಿ ಯೋಜನೆಯ ವಿಶೇಷ ಸಭೆಯಲ್ಲಿ ಮಾತನಾಡಿದರು.

ಉದ್ಯೋಗ ಖಾತ್ರಿ ಯೋಜನೆಯು ಬೇಡಿಕೆ ಆಧಾರಿತ ಯೋಜನೆಯಾಗಿದೆ. ನಮೂನೆ-6ರಲ್ಲಿ ಬೇಡಿಕೆ ಪಡೆಯುವಾಗ ಕಡ್ಡಾಯವಾಗಿ ಅರ್ಧಕ್ಕೂ ಹೆಚ್ಚು ಮಹಿಳೆಯರ ಹೆಸರು ಇರುವಂತೆ ಹಾಗೂ ಎನ್‌ಎಂಎಂಎಸ್ ಆ್ಯಪ್‌ನಲ್ಲಿ ಹಾಜರಾತಿ ಹಾಕುವಾಗ ಕೂಡ ಬಿಎಫ್‌ಟಿ ಹಾಗೂ ಡಿಇಒರವರು ಈ ಬಗ್ಗೆ ಗಮನವಹಿಸಬೇಕು. ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ನಡೆಯುವ ▸▸3ನೇ ಪುಟಕ್ಕೆ

> ಮಹಿಳೆಯರು ಖಾಸಗಿ ಕಾಮಗಾರಿಯೂ ಸೇರಿದಂತೆ ಇತರೆಡೆ ದುಡಿದರೆ, ನೀಡುವ ವೇತನದಲ್ಲಿ ತಾರತಮ್ಯವಿದೆ. ಪುರುಷರಿಗೆ ನೀಡುವಷ್ಟು ಕೂಲಿ ಹಣವನ್ನು ಮಹಿಳಾ ಕಾರ್ಮಿಕರಿಗೆ ನೀಡುವುದಿಲ್ಲ. ಆದರೆ, ನರೇಗಾದಡಿ ಸಮಾನ ಕೂಲಿ ನಿಯಮವಿದೆ. ಹೀಗಿದ್ದರೂ ನರೇಗಾ ಯೋಜನೆಯ ಕಾಮಗಾರಿಗಳಲ್ಲಿ ಮಹಿಳಾ ಕಾರ್ಮಿಕರ ಪಾಲ್ಗೊಳ್ಳುವಿಕೆ ಕಡಿಮೆಯಾಗಿರುವದಕ್ಕೆ ಕಾರಣಗಳು ತಿಳಿದುಬರುತ್ತಿಲ್ಲ.
>
> ಇದನ್ನು ಮನಗಂಡ ಜಿಲ್ಲಾ, ತಾಲೂಕು ಪಂಚಾಯತಿ ವತಿಯಿಂದ ಮುಂಬರುವ ಎಲ್ಲ ಕಾಮಗಾರಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸುವಂತೆ ಜಾಗೃತಿ ಮೂಡಿಸುವುದು ಹಾಗೂ ಕಡ್ಡಾಯವಾಗಿ ಮಹಿಳೆಯರ ಹೆಸರಿನಲ್ಲಿ ಎನ್‌ಎಂಆರ್ ಸೃಜಿಸುವಂತೆ ಸೂಚಿಸಿದ್ದಾರೆ. ಎನ್‌ಆರ್‌ಎಲ್‌ಎಂ, ತೋಟಗಾರಿಕೆ ಇಲಾಖೆ, ಮನರೇಗಾ ಯೋಜನೆ ಸಹಯೋಗದಲ್ಲಿ ಪೌಷ್ಠಿಕ ತೋಟ ಕಾಮಗಾರಿ ಕೈಗೊಳ್ಳಲು ಉದ್ದೇಶಿಸಲಾಗಿದೆ.
>
> – ಕಿರಣಕುಮಾರ ಎಸ್ ಎಚ್.

### ಲಕ್ಷ್ಮೇಶ್ವರ ಪೊಲೀಸರ ಕಾರ್ಯಾಚರಣೆ: 1.39 ಲಕ್ಷ ರೂ. ಬೆಲೆಬಾಳುವ ಆಭರಣಗಳು ವಶಕ್ಕೆ

# ಬೆಳ್ಳಿ, ಬಂಗಾರದ ಆಭರಣ ಕಳ್ಳರ ಬಂಧನ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಗದಗ ಜಿಲ್ಲಾ ಎಸ್‌ಪಿ, ಡಿಎಸ್‌ಪಿ ಹಾಗೂ ಸಿಪಿಐ ವಿಕಾಸ ಲಮಾಣಿ ಮಾರ್ಗದರ್ಶನದಲ್ಲಿ ಲಕ್ಷ್ಮೇಶ್ವರ ಪೊಲೀಸ್ ಠಾಣೆಯ ಪಿಎಸ್‌ಐ ಯೂಸೆಫ್ ಜಮೂಲಾ, ಕ್ರೈಂ ಪಿಎಸ್‌ಐ ವಿ ಜಿ ಪವಾರ ನೇತೃತ್ವದಲ್ಲಿ ಪಟ್ಟಣದ ಪೊಲೀಸರು ಕಾರ್ಯಾಚರಣೆ ನಡೆಸಿ, ಬೆಳ್ಳಿ ಮತ್ತು ಬಂಗಾರದ ಆಭರಣಗಳನ್ನು ಕಳ್ಳತನ ಮಾಡುತ್ತಿದ್ದ ಕಳ್ಳರನ್ನು ಬಂಧಿಸಿದ್ದು, ಬಂಧಿತರಿಂದ 1.39 ಲಕ್ಷ ರೂ. ಬೆಲೆಬಾಳುವ ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ಪಟ್ಟಣದ ಪೊಲೀಸ್ ಠಾಣೆ ವ್ಯಾಪ್ತಿಯ ರಾಮಗೇರಿ ಪು ಬಡ್ನಿಯಲ್ಲಿ ಮನೆ ಕಳ್ಳತನ ಮಾಡಿದ್ದ ಹನುಮಂತ ಕುಂಚಿಕೊರವರ, ಮಂಜುನಾಥ ಬಿಸಕಲ್ಲವಡ್ಡರ, ಲಕ್ಷ್ಮೇಶ್ವರದ ಇಟ್ಟಿಕೆರೆಯ ದಂಡೆಯ ಗುಡಿಸಲ ಬಳಿ ಕಳ್ಳರನ್ನು ಬಂಧಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಪಾಲ್ಗೊಂಡ ಎಎಸ್‌ಐಗಳಾದ ಎನ್ ಎ ಮೌಲ್ವಿ, ಟಿ ಕೆ ರಾಠೋಡ್, ವೈ ಎಸ್ ಕುಬಿಹಾಳ, ಜಿ ಎಂ ಬೂದಿಹಾಳ, ಸಿಬ್ಬಂದಿಗಳಾದ ಎಂ ಎ ಶೇಖ್, ಎಂ ಡಿ ಲಮಾಣಿ, ಎಂ ಎಸ್ ಬಳ್ಳಾರಿ, ಸಿ ಎಸ್ ಮಠಪತಿ, ಡಿ ಎಸ್ ನದಾಫ್, ಜಿ ಆರ್ ಗ್ರಾಮ ಪುರೋಹಿತ್, ಎಚ್ ಐ ಕಲ್ಲಣ್ಣವರ, ಸಂಜೀವ ಕೊರಡೂರ, ಎಫ್ ಸಿ ತಡಸಿ, ಮಂಜು ಲಮಾಣಿ, ಎಂಎಸ್ ಅಂಗಡಿ, ಎಂ ಎಚ್ ಐಗಾರ, ಅಪ್ಪಣ್ಣ ರಾಠೋಡ್, ಹನುಮರೆಡ್ಡಿ ತಾರಿಕೊಪ್ಪ, ಕೆಬಿ ಹುಲಗೂರು ಇವರ ಕಾರ್ಯಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ ಎಸ್ ನೇಮಗೌಡ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

> ಆರೋಪಿತರಿಂದ ಬಂಗಾರದ ಕಿವಿ ಓಲೆ, ಬೆಳ್ಳಿ ಪೆಂಡೆದ ಗೆಜ್ಜೆ, ಬೆಳ್ಳಿ ಬ್ರಾಸಲೆಟ್, ಎರಡು ಜೊತೆ ಬೆಳ್ಳಿ ಕಾಲು ಚೈನ್, 15 ಗ್ರಾಮ್‌ನ ಬಂಗಾರದ ಚೈನ್, 12 ಗ್ರಾಮ್ ತೂಕದ ಬಂಗಾರದ ನೆಕ್ಲೆಸ್, 20 ಗ್ರಾಮ್‌ನ ಎರಡು ಬೆಳ್ಳಿ ಕಾಲು ಚೈನ್, 1 ಬೆಳ್ಳಿ ಬುಡಗಡಗಿ, ಬೆಳ್ಳಿಯ ಚೈನ್ ಹೀಗೆ ಒಟ್ಟು 35 ಗ್ರಾಮ್ ಬಂಗಾರದ ಆಭರಣಗಳ ಅಂದಾಜು ಮೊತ್ತ 1 ಲಕ್ಷ 6500 ರೂ ಹಾಗೂ 300 ಗ್ರಾಮ್ ತೂಕದ ಬೆಳ್ಳಿ ಆಭರಣಗಳ ಅಂದಾಜು ಕಿಮ್ಮತ್ತು 32,500 ರೂ ಸೇರಿದಂತೆ ಒಟ್ಟು 1.39 ಲಕ್ಷ ರೂ ಬೆಲೆಬಾಳುವ ಆಭರಣಗಳನ್ನು ಪೊಲೀಸರು ವಸಪಡಿಸಿಕೊಂಡಿದ್ದಾರೆ.

## ಚುನಾವಣಾ ವೇಳಾಪಟ್ಟಿ ಪ್ರಕಟ

■ವಿಜಯಸಾಕ್ಷಿ ಸುದ್ದಿ, ಗದಗ



ರಾಜ್ಯ ಚುನಾವಣಾ ಆಯೋಗದ ಆದೇಶನ್ವಯ ಜಿಲ್ಲೆಯ ಮುಂಡರಗಿ ತಾಲೂಕಿನ ಮುರಡಿ ಹಾಗೂ ಮುರಡಿತಾಂಡ ಗ್ರಾಮ ಪಂಚಾಯತಿಯ ಎಲ್ಲಾ ಚುನಾವಣಾ ಕ್ಷೇತ್ರಗಳ ಸದಸ್ಯರ ಪದಾವಧಿ ಮುಕ್ತಾಯವಾಗುವ ಕಾರಣದಿಂದ ತೆರವಾದ ಸದಸ್ಯ ಸ್ಥಾನಗಳನ್ನು ಸಾರ್ವತ್ರಿಕ ಚುನಾವಣೆ ಮುಖಾಂತರ ತುಂಬಲು ಹಾಗೂ ಮುಂಡರಗಿ ತಾಲೂಕು ಡೋಣಿ ಗ್ರಾಮ ಪಂಚಾಯತ್‌ದಲ್ಲಿ ವಿವಿಧ ಕಾರಣಗಳಿಂದ ತೆರವಾಗಿ ಖಾಲಿ ಉಳಿದಿರುವ ಸದಸ್ಯ ಸ್ಥಾನಗಳಿಗೆ ಉಪಚುನಾವಣೆ ಜರುಗಿಸಲು ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ.

ಚುನಾವಣಾ ಅಧಿಸೂಚನೆಯನ್ನು ಜುಲೈ 6 ರಂದು ಹೊರಡಿಸಲಾಗಿದ್ದು, ನಾಮಪತ್ರಗಳನ್ನು ಜುಲೈ 12 ರೊಳಗೆ ಸಲ್ಲಿಸಬಹುದಾಗಿದೆ. ಜುಲೈ 13 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ಉಮೇದುವಾರಿಕೆ ಹಿಂತೆಗೆದುಕೊಳ್ಳಲು ಜುಲೈ 15 ಕೊನೆಯ ದಿನವಾಗಿದೆ. ಜುಲೈ 23 ರಂದು ಬೆಳಿಗ್ಗೆ 7 ರಿಂದ ಸಂಜೆ 5 ರವರೆಗೆ ಮತದಾನ ಜರುಗಲಿದೆ. ಅವಶ್ಯವಿದ್ದರೆ ಮರುಮತದಾನವನ್ನು ಜುಲೈ 25 ಕ್ಕೆ ನಡೆಸಲಾಗುವುದು. ಜುಲೈ 26 ರಂದು ಬೆ.8 ಗಂಟೆಯಿಂದ ತಾಲೂಕು ಕೇಂದ್ರಗಳಲ್ಲಿ ಮತಗಳ ಎಣಿಕೆ ಜರುಗಲಿದ್ದು ಅದೇ ದಿನ ಚುನಾವಣೆ ಪ್ರಕ್ರಿಯೆ ಮುಕ್ತಾಯಗೊಳ್ಳಲಿದೆ ಎಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ತಿಳಿಸಿದ್ದಾರೆ.

## ವೈದ್ಯರ ಕೊರತೆ: ಅಧಿವೇಶನದಲ್ಲಿ ಶಾಸಕ ಡಾ. ಚಂದ್ರು ಲಮಾಣಿ ಪ್ರಸ್ತಾಪ

■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ



ಗುರುವಾರ ನಡೆದ ವಿಧಾನಸಭೆ ಅಧಿವೇಶನದಲ್ಲಿ ಶಿರಹಟ್ಟಿ ಮತಕ್ಷೇತ್ರದಲ್ಲಿ ವೈದ್ಯರ ಕೊರತೆಯಿರುವ ಕುರಿತು ಶಾಸಕ ಡಾ. ಚಂದ್ರು ಲಮಾಣಿ ಸಭಾಧ್ಯಕ್ಷರಿಗೆ ತಿಳಿಸಿದರು.

ಈ ಕುರಿತು ಮಾತನಾಡಿದ ಶಾಸಕ ಡಾ. ಚಂದ್ರು ಲಮಾಣಿ, ಶಿರಹಟ್ಟಿ ಮತಕ್ಷೇತ್ರದಲ್ಲಿ 9 ಪ್ರಾಥಮಿಕ ಆರೋಗ್ಯ ಕೇಂದ್ರಗಳಿದ್ದು, ಇವುಗಳಲ್ಲಿ 3-4 ಆರೋಗ್ಯ ಕೇಂದ್ರಗಳಲ್ಲಿ ಖಾಯಂ ವೈದ್ಯರು ಇಲ್ಲದೇ ಇರುವುದರಿಂದ ಟ್ರೈನಿ ವೈದ್ಯರನ್ನು ಹಾಕಿದ್ದು, ಇವರನ್ನು ಆರೋಗ್ಯ ಇಲಾಖೆಯ ಕಾರ್ಯಕ್ರಮಗಳಲ್ಲಿ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಖಾಯಂ ವೈದ್ಯರನ್ನು ನಿಯೋಜಿಸಬೇಕು.

ಶಿರಹಟ್ಟಿಯಲ್ಲಿ 100 ಹಾಸಿಗೆಯ ಆಸ್ಪತ್ರೆಗೆ ಈ ಹಿಂದೆ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅವಧಿಯಲ್ಲಿ ಮಂಜೂರಾತಿಯಾಗಿತ್ತು. ಇಲ್ಲಿಯವರೆಗೂ ಅನುದಾನ ಬಿಡುಗಡೆಯಾಗಿಲ್ಲವೆಂದು ಪ್ರಸ್ತಾಪಿಸಿದ ಸಂದರ್ಭದಲ್ಲಿ, ಸಚಿವ ದಿನೇಶ ಗುಂಡೂರಾವ್ ಅವರು 100 ಹಾಸಿಗೆಯ ಸುಸಜ್ಜಿತ ಆಸ್ಪತ್ರೆಗೆ ಅಂದಾಜು 30 ಕೋಟಿ ರೂ. ವೆಚ್ಚವಾಗಲಿದೆ. ಈ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಅನುದಾನ ಒದಗಿಸುವ ಭರವಸೆಯನ್ನು ನೀಡಿದ್ದಾರೆ ಎಂದರು.

## ಶ್ಯಾಮ ಪ್ರಸಾದ ಮುಖರ್ಜಿಯವರ ಜನ್ಮದಿನ ಆಚರಣೆ

■ವಿಜಯಸಾಕ್ಷಿ ಸುದ್ದಿ, ಗದಗ



ಭಾರತೀಯ ಜನತಾ ಪಾರ್ಟಿ ಗದಗ ಜಿಲ್ಲಾ ಕಾರ್ಯಾಲಯದಲ್ಲಿ ಭಾರತೀಯ ಜನಸಂಘದ ಸಂಸ್ಥಾಪಕರಾದ ಶ್ಯಾಮ ಪ್ರಸಾದ ಮುಖರ್ಜಿ ಅವರ ಜನ್ಮದಿನವನ್ನು ಆಚರಿಸಲಾಯಿತು.

ಮುಖರ್ಜಿಯವರು ಜುಲೈ 6, 1901ರಲ್ಲಿ ಕಲ್ಕತ್ತಾದಲ್ಲಿ ಜನಿಸಿದರು. ದೇಶದ ಪ್ರಪ್ರಥಮ ಸರ್ಕಾರದಲ್ಲಿ ಕೈಗಾರಿಕಾ ಸಚಿವರಾದ ಶ್ಯಾಮ ಪ್ರಸಾದ ಮುಖರ್ಜಿ, ಜವಹಾರಲಾಲ್ ನೆಹರು ಮಂಡಿಸಿದ ಕಾಶ್ಮೀರದ ಪ್ರತ್ಯೇಕತೆಯ ವಿಷಯವನ್ನು ವಿರೋಧಿಸಿ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ಜನಸಂಘವನ್ನು ಸ್ಥಾಪಿಸಿದರು ಎಂದು ಗದಗ ಜಿಲ್ಲೆಯ ಬಿಜೆಪಿ ಅಧ್ಯಕ್ಷ ಮುತ್ತಣ್ಣ ಲಿಂಗನಗೌಡ್ರ ಮುಖರ್ಜಿಯವರ ಜೀವನ, ಹೋರಾಟ, ಬಲಿದಾನಗಳ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ಜಿಲ್ಲಾ ಕೋಶಾಧ್ಯಕ್ಷ ನಾಗರಾಜ ಕುಲಕರ್ಣಿ, ಗದಗ ನಗರ ಮಂಡಲ ಅಧ್ಯಕ್ಷ ಅನಿಲ ಅಬ್ಬಿಗೇರಿ, ಪ್ರಮುಖರಾದ ಶಶಿಧರ ದಿಂಡೂರ, ವಿನೋದ ಹಂಸನೂರ, ಮಂಜುನಾಥ ಮುಂತಾದ ಪ್ರಮುಖರು ಉಪಸ್ಥಿತರಿದ್ದರು.

## ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ಕನ್ನಡ ಸಾಹಿತ್ಯ ಪರಿಷತ್ತು 2023-24ನೇ ಸಾಲಿನ ಕನ್ನಡ ಪ್ರವೇಶ, ಕಾವ, ಜಾಣ ಹಾಗೂ ರತ್ನ ಪರೀಕ್ಷೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ. 2023ರ ಡಿಸೆಂಬರ್ ಕೊನೆಯ ವಾರದಲ್ಲಿ ನಡೆಯುವ ಮೇಲ್ಕಂಡ ಪರೀಕ್ಷೆಗಳಿಗೆ ಅರ್ಜಿಯನ್ನು ಸಲ್ಲಿಸಲು ಆಗಸ್ಟ್ 31 ಕೊನೆಯ ದಿನಾಂಕವಾಗಿದ್ದು, ಸೆಪ್ಟೆಂಬರ್ 15 ರವರೆಗೆ ದಂಡ ಶುಲ್ಕ ರೂ. 50-00 ಅನ್ನು ಹೆಚ್ಚುವರಿಯಾಗಿ ನೀಡಿ ಅರ್ಜಿ ಸಲ್ಲಿಸಬಹುದು.

ಪರೀಕ್ಷಾ ನಿಯಮಾವಳಿ ಹಾಗೂ ಅರ್ಜಿಯನ್ನು ರೂ. 25ಗಳ ಶುಲ್ಕ ಪಾವತಿಸಿ, ಕನ್ನಡ ಸಾಹಿತ್ಯ ಪರಿಷತ್ತಿನ ಮಾರಾಟ ಮಳಿಗೆಯಲ್ಲಿ (ಬೆಂಗಳೂರು) ಪಡೆಯಬಹುದು. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಹೆಸರಿಗೆ ಮೂವತ್ತು ರೂಪಾಯಿ ಮನಿಯಾರ್ಡರ್ ಮಾಡಿದರೆ ಅರ್ಜಿಯನ್ನು ತಾವು ನೀಡಿರುವ ವಿಳಾಸಕ್ಕೆ ಅಂಚೆ ಮೂಲಕ ಕಳುಹಿಸಲಾಗುವುದು.

ಪರೀಕ್ಷಾ ಅರ್ಜಿಗಳನ್ನು ಅಂತರ್ಜಾಲ ತಾಣ www.kasapa.in ಮೂಲಕ ಸಹ ಪಡೆದುಕೊಳ್ಳಬಹುದು.

ಹೆಚ್ಚಿನ ವಿವರಗಳಿಗೆ ಗೌರವ ಕಾರ್ಯದರ್ಶಿ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು 560018,ದೂರವಾಣಿ ಸಂಖ್ಯೆ ದೂರವಾಣಿ ಸಂಖ್ಯೆ : 080-26612991, 22423867, 26623584 ಸಂಪರ್ಕಿಸಬಹುದಾಗಿದೆ.

## ತಾರಾಲಯ ವೀಕ್ಷಿಸಿ ವಿಸ್ಮಿತರಾದ ಸನ್ಮಾರ್ಗ ಕಾಲೇಜು ವಿದ್ಯಾರ್ಥಿಗಳು



■ವಿಜಯಸಾಕ್ಷಿ ಸುದ್ದಿ, ಗದಗ

ನಗರದಲ್ಲಿ ಆರಂಭಗೊಂಡ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಮತ್ತು ತಾರಾಲಯ ಸಂಸ್ಥೆಗೆ ಸ್ಥಳೀಯ ಸನ್ಮಾರ್ಗ ಪದವಿಪೂರ್ವ ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಭೇಟಿ ನೀಡಿ, ಗ್ರಹಗಳ ಚಲನೆ, ಗ್ರಹಗಳ ಮಹತ್ವ, ವಿಜ್ಞಾನದಲ್ಲಿನ ಆವಿಷ್ಕಾರಗಳನ್ನು, ಸೃಷ್ಠಿಥಿ ವಿಸ್ಮಯಗಳನ್ನು ವೀಕ್ಷಣೆ ಮಾಡಿದರು. ವಿಜ್ಞಾನ ವಿಸ್ಮಯಕ್ಕೆ ಸಂಬಂಧಿಸಿ ಹಲವಾರು ಸಂಗತಿಗಳನ್ನು, ಸಂಶೋಧನಾತ್ಮ ಜ್ಞಾನವನ್ನು ಅರಿತು, 3ಡಿ ಪ್ರದರ್ಶನಗಳನ್ನು ವೀಕ್ಷಿಸಿ ಸಂತಸಪಟ್ಟರು.

ಈ ಸಂದರ್ಭದಲ್ಲಿ ಮಾಹಿತಿ ನೀಡಿದ ಸಂಸ್ಥೆಯ ಚೇರಮನ್ ಪ್ರೊ. ರಾಜೇಶ ಕುಲಕರ್ಣಿ, ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗೆ ಇಂತಹ ಅಭೂತಪೂರ್ವ ಆಕಾಶಕಾಯ, ನಕ್ಷತ್ರ ಪುಂಜಗಳನ್ನು ನೋಡಿ, ಅವರ ಸದಭಿರುಚಿಯನ್ನು ಬೆಳಸಲು ಅವಕಾಶ ಕಲ್ಪಿಸಿದ ಜಿಲ್ಲಾಡಳಿತದ ಸೇವೆಯನ್ನು ಶ್ಲಾಘಿಸಿದರು.

ಸಂಸ್ಥೆಯ ಸದಸ್ಯ ಪ್ರೊ. ಉಡುಪಿ ದೇಶಪಾಂಡೆ ಮಾತನಾಡಿ, ವಿದ್ಯಾರ್ಥಿಗಳಿಗೆ ಇದರಿಂದ ಖಗೋಳ ವಿಜ್ಞಾನದ ಹತ್ತಾರು ಸಂಗತಿಗಳನ್ನು ಅರಿಯಲು ಸಹಾಯಕಾರಿಯಾಗಿದೆ. ಸರ್ವರೂ ಇದರ ಸದುಪಯೋಗ ಪಡೆಯಬೇಕೆಂದರು.

ಕಾಲೇಜಿನ ಪ್ರಾಚಾರ್ಯ ಪ್ರೊ. ಪ್ರೇಮಾನಂದ ರೋಣದ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ತಾರಾಲಯದ ವೀಕ್ಷಣೆಯಲ್ಲಿ ಸಂಸ್ಥೆಯ ಸದಸ್ಯರಾದ ಪ್ರೊ. ರೋಹಿತ್ ಒಡೆಯರ್, ಪ್ರೊ. ರಾಹುಲ್ ಒಡೆಯರ್, ಪ್ರೊ. ಸೈಯದ್ ಮತೀನ್ ಮುಲ್ಲಾ, ಆಡಳಿತಾಧಿಕಾರಿಗಳಾದ ಪ್ರೊ. ಎಂ ಸಿ ಹೀರೇಮಠ, ಎಲ್ಲ ಉಪನ್ಯಾಸಕರು ಮತ್ತು ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

ಕೊನೆಯಲ್ಲಿ ತಾರಾಲಯದ ಸಿಬ್ಬಂದಿಗಳಾದ ಸದಾನಂದ ಚಲವಾದಿ, ಸಿದ್ದು ಬಿದರಿ, ಆಸಿಫ್ ಡಂಬಳ ತಾರಾಲಯದ ಸಮಸ್ತ ಮಾಹಿತಿಗಳನ್ನು ತಿಳಿಸಿ, ವಿದ್ಯಾರ್ಥಿಗಳಿಗೆ ಉತ್ತಮ ವಿವರಣೆ ನೀಡಿದ್ದಕ್ಕಾಗಿ ಸಂಸ್ಥೆಯ ವತಿಯಿಂದ ಗೌರವಿಸಲಾಯಿತು.

### ಮಾನವೀಯತೆಗೆ ಮಿಡಿಯುವ ಮನಸ್ಸಿಗೆ ಬೆಲೆಯೇ ಹೊರತು ಬಾಹ್ಯ ಸೌಂದರ್ಯಕ್ಕಲ್ಲ

# ಹಾಗಲಕಾಯಿ-ಸಕ್ಕರೆಯ ಕಥೆ ನಿಮಗೆ ಗೊತ್ತಾ?!

ತಲೆಬರಹ ನೋಡಿ ಇದೇನೋ ಮುದ್ರಣ ದೋಷವಾಗಿದೆ ಎಂದುಕೊಳ್ಳಬೇಡಿ. ಈಗ ನಾನು ಹೇಳಹೊರಟಿರುವದು ಹಾಲು-ಸಕ್ಕರೆಯ ಕಥೆಯಲ್ಲ, ಖಂಡಿತಾ ಹಾಗಲಕಾಯಿ-ಸಕ್ಕರೆಯ ಕಥೆಯನ್ನೇ! ಮೊದಲಿನ ಕಥೆಯನ್ನು ಯಾರೂ ಹೇಳಿರ್ತಾರೆ. ಎರಡನೆಯದನ್ನೂ ತಿಳಿದುಕೊಳ್ಳಬೇಕಲ್ಲ?!

ಒಮ್ಮೆ ಅದು ಹೇಗೋ ಹಾಗಲಕಾಯಿ ಮತ್ತು ಸಕ್ಕರೆ ಎದುರು-ಬದುರಾದವು. ಸಕ್ಕರೆ ಹಾಗಲಕಾಯಿಯನ್ನು ನೋಡಿ ಹೊಟ್ಟೆ ಹುಣ್ಣಾಗುವಷ್ಟು ನಕ್ಕುಬಿಟ್ಟಿತು. ಹ್ಯಾಪುಮೋರೆ ಮಾಡಿಕೊಂಡ ಹಾಗಲಕಾಯಿ 'ಯಾಕಣ್ಣೊ, ನನ್ ನೋಡಿ ಅಷ್ಟೋಂದು ನಗ್ತಿದೀಯಾ?' ಎಂದಾಗ ಸಕ್ಕರೆ, 'ಅಲ್ಲಾ ಮಾರಾಯ. ನೀನು ನೋಡೋಕೆ ಅದೆಷ್ಟು ಕುರೂಪವಾಗಿದ್ದೀಯ, ತಿನ್ನಲಂತೂ ಕಹಿ. ನಿನ್ನನ್ನ ಯಾರು ತಾನೇ ಇಷ್ಟಪಡ್ತಾರೆ? ಅದೇ ನನ್ನನ್ನ ನೋಡು. ಎಷ್ಟು ಬೆಳ್ಳಗೆ ಫಳಫಳ ಹೊಳೀತಾ ಇದೀನಿ. ಎಲ್ರೂ ನನ್ನನ್ನೇ ಇಷ್ಟಪಡ್ತಾರೆ. ನಿನ್ನಂಥೋರು ಯಾಕಾದ್ರೂ ಈ ಭೂಮಿ ಮೇಲೆ ಇನ್ನೂ ಇದೀರೋ...' ಅಂದಿತು. ಇದನ್ನ ಕೇಳಿದ ಹಾಗಲಕಾಯಿ ಸಮಾಧಾನದಿಂದ 'ಆಯ್ತು ಬುಡಣ್ಣ. ಅವರವ್ರ ಯೋಗ್ಯತೆ ಅವರವ್ರಿಗೆ. ನಿನ್ನನ್ನ ಎಲ್ರೂ ಇಷ್ಟಪಡೋದೇನೋ ಸರಿ. ಆದ್ರೆ, ನಿನ್ನ ಬೆನ್ನ ಹಿಂದೆ ನಡೆಯೋದು ನಿನಗೆ ಗೊತ್ತಾಗ್ತಿಲ್ಲ ಅಷ್ಟೇ.



ನೀನು ಹೋದಲ್ಲೆಲ್ಲಾ ನಾನೂ ಬರ್ತೀನಿ. ಅದು ನಿನಗೆ ಗೊತ್ತಿಲ್ಲ ಬಿಡು' ಅಂತ ಹೇಳಿ ಸುಮ್ಮನೇ ಹೊರಟುಹೋಯ್ತು.

ಇರಲಿ. ಕಥೆಯ ಸುದ್ದಿ ಬಿಡಿ. ಇತ್ತೀಚಿನ ವರ್ಷಗಳಲ್ಲಿ ಮದುವೆಯ ವಿಚಾರದಲ್ಲೂ ಇದೇ ಹಾಗಲಕಾಯಿ-ಸಕ್ಕರೆಯ ಕಥೆಯಾಗಿಬಿಟ್ಟಿದೆ. ಮದುವೆಯ ಪ್ರಾಯಕ್ಕೆ ಬಂದ ಹೆಚ್ಚಿನವರಿಗೆ ಸಕ್ಕರೆಯಷ್ಟೇ ಬೇಕಿದೆ. ಅಂದರೆ, ಸ್ವಭಾವ, ಗುಣಗಳು ಹೇಗೇ ಇದ್ದರೂ ನೋಡಲು ಹುಡುಗಿ ಮಾತ್ರ ತೆಳ್ಳಗೆ, ಬೆಳ್ಳಗೆ, ಕಾಣಲು ಸುಂದರವಾಗಿರಬೇಕು! ಹುಡುಗರಾದರೋ, ತಲೆತುಂಬ ಕ್ರಾಪು, ಎತ್ತರದ ಕಟ್ಟುಮಸ್ತಾದ ಮೈಕಟ್ಟು, ಓಡಾಡಲು ಕಾರು, ಬೆಂಗಳೂರಲ್ಲೊಂದು ಸ್ವಂತ ಮನೆ, ಲಕ್ಷದ ಮೇಲಿನ ಸಂಬಳದ ನೌಕರಿ ಇಷ್ಟಿದ್ರೆ ಸಾಕು! ಸಕ್ಕರೆ ಹೆಚ್ಚಾದರೆ ಬರುವದು ಸಕ್ಕರೆ ಖಾಯಿಲೆಯೇ ಹೊರತು ಮತ್ತೇನಿಲ್ಲ. ಇದಕ್ಕೆ ವೈದ್ಯರು ಸೂಚಿಸುವದು ಹಾಗಲಕಾಯಿ ರಸದ ಸೇವನೆಯನ್ನೇ ಅಲ್ಲವಾ?!

ಪ್ರಸ್ತುತ ಹಳ್ಳಿಗಳಲ್ಲಂತೂ 30 ಬಿಡಿ, 35-38 ವರ್ಷ ದಾಟಿದ ಅದೆಷ್ಟೋ ಚಿರಯುವಕರು ಇನ್ನೂ ಶಾದೀ ಭಾಗ್ಯವಿಲ್ಲದೇ ಬರಡಾಗುತ್ತಿದ್ದಾರೆ. ಅಮ್ಮ ಮುಸ್ಸಂಜೆ ಹೊತ್ತಲ್ಲಿ ದೇವರ ಪೀಠದೆದುರೊಂದು ದೀಪ ಹಚ್ಚಿ ಮನೆ ಬೆಳಗುವ ಸೊಸೆ ಎಂದು ಬಂದಾಳು ಎಂದು ಕಂಡ ಕಂಡ ದೇವರಿಗೆಲ್ಲಾ ಹರಕೆ ಹೊತ್ತು ಸುಸ್ತಾಗುತ್ತಿದ್ದಾಳೆ. ಮದುವೆ ಬ್ರೋಕರುಗಳು ಅಲ್ಲೊಂದು ಸಂಬಂಧ ಇದೆ, ಇಲ್ಲೊಂದು ಕೇಳಿ ನೋಡ್ತೀನಿ ಇರಿ ಎನ್ನುತ್ತ ಸಾಧ್ಯವಾದಷ್ಟೂ ತಮ್ಮ ಕಿಸೆ ಭರ್ತಿ ಮಾಡಿಕೊಂಡು 'ಬಿಡವಾ, ಅವ್ರಿಗೆ ಕೃಷಿ ಮಾಡೋರು, ಹಳ್ಳೀಲಿ ಜೀವ್ನ ಮಾಡೋರು ಬ್ಯಾಡಂತೆ. ನೌಕರಿ ಇರೋರನ್ನೇ ನೋಡ್ತಿದಾರಂತೆ ಬಿಡು' ಎಂದು ಕೊನೆಗೆ ಕೈತೊಳೆದುಕೊಂಡಿದ್ದೂ ಆಯ್ತು. ಅಷ್ಟೇನಾ? ಹಳ್ಳಿ ಜೀವನ ನಡೆಸುತ್ತಿರುವವರು, ಕೃಷಿಯಲ್ಲೇ ಏಳಿಗೆ ಕಾಣುತ್ತಿರುವವರು ನೆಮ್ಮದಿಯಿಂದಿಲ್ಲವಾ? ಹೊಟ್ಟೆಬಟ್ಟೆಗೇನು ಕೊರತೆಯಾ? ನಾಲ್ಕಾರು ಎಕರೆ ಸ್ವಂತ ಜಮೀನು, ಮನೆ, ಓಡಾಡಲು ಬೈಕು ಇದ್ದರೂ ಸಾಲದಾ? ಅದೆಲ್ಲಕ್ಕಿಂತ ಹೆಚ್ಚಾಗಿ, ಮನುಷ್ಯತ್ವ, ಪ್ರಾಮಾಣಿಕತೆ, ಸ್ವಾಭಿಮಾನಗಳಿಗೆ ಕಿಮ್ಮತ್ತಿಲ್ಲವಾ?

ಇನ್ನು ಈ ಹುಡುಗ ಬುದ್ಧಿಯ ಪಾಡೇನು ಬೇರೆಯಾ? ಬೆಂಗಳೂರಿನ ಒಂದಿಷ್ಟು ಏರಿಯಾಗಳನ್ನು ಓಡಾಡಿಕೊಂಡು 'ಅಯ್, ಇಲ್ಲೇನ್ ಕಿಸೀತೀಯಾ ಬಿಡು ಮಗಾ, ಬಾ ಬೆಂಗ್ಳೂರಿಗೆ. ಸ್ವರ್ಗಕ್ಕೆಷ್ಟು ಗೇಣು ಅಂತ ಲೆಕ್ಕ ಮಾಡೋದೇ ಬ್ಯಾಡ. ಅದೇ ಸ್ವರ್ಗ' ಎಂತಲೇ ಕಳೆದಿರುತ್ತಾರೆ. ಒಂದಿಷ್ಟೂ ಗಂಭೀರತೆ, ಜೀವನ-ಭವಿಷ್ಯಗಳ ಅರಿವು ಮೂಡಿಸಿಕೊಳ್ಳದೇ, ಆ ಹರಳೆಣ್ಣೆ ಮುಖದ ಹುಡುಗೀನಾ ನಾನು ಮದುವೆಯಾಗ್ಲಾ? ಜೀವ್ನ ನರಕವೇ ಆಗೋಯ್ತದೆ' ಎಂದು ಮನೆಯವರು ತೋರಿಸಿದ ಸಾಲು ಸಾಲು ಹುಡುಗಿಯರನ್ನೆಲ್ಲಾ ಬದಿಗೊತ್ತಿದ್ದಾಯ್ತು. ವಯಸ್ಸೂ 35 ದಾಟಿತು. ಇನ್ನೆಲ್ಲಿಯ ಮದುವೆ?

ನಿಜವಾದ ಬೆಲೆಯಿರುವದು ಸೌಂದರ್ಯಕ್ಕಲ್ಲ ಸ್ವಾಮೀ. ಮನಸ್ಸಿಗೆ. ಮಾನವೀಯತೆಗೆ. ಮನೆ ನಡೆಸಿಕೊಂಡು ಹೋಗುವ ಒಳ್ಳೆಯ ಬುದ್ಧಿ-ನಡತೆಗೆ. ಎಂಥ ಸಂದರ್ಭದಲ್ಲೂ ಜೊತೆಗಿರುತ್ತೇನೆಂಬ ಬದ್ಧತೆಗೆ. ಕಷ್ಟ ಸುಖಗಳೆರಡನ್ನೂ ಸರಿದೂಗಿಸಿ ನೆಮ್ಮದಿಯ ಸಂಸಾರ ನಡೆಸುವ ಚತುರತೆಗೆ. ಎದುರಾಗುವ ಪ್ರತೀ ಸಂಕಷ್ಟವನ್ನೂ ಮಣಿಸೋಣ ಎಂಬ ಧೈರ್ಯಕ್ಕೆ. ಮನೆಯ ಹಿರಿ-ಕಿರಿಯರನ್ನೆಲ್ಲ ಒಂದೇ ಬಾಂಧವ್ಯದಿಂದ ಕಾಣುವ ಮನಸ್ಸಿಗೆ. ಇಂದಿದ್ದು ನಾಳೆ ಮುಪ್ಪಾಗುವ ಸೌಂದರ್ಯ ಕೊನೆವರೆಗೂ ಜೊತೆಯಾಗಲಾರದು. ಏನೋ ವಯಸ್ಸಾಯ್ತು, ತಲೆಗೂದಲು ಬೆಳ್ಳಗಾಗತೊಡಗಿತು, ಚರ್ಮ ಮುದುರಿತು ಎಂದು ಸಂಗಾತಿಯನ್ನು ಬಿಟ್ಟುಬಿಡಲು ಸಾಧ್ಯವಾ? ಕೊನೆವರೆಗೂ ಜೊತೆಯಾಗುವದು ಕಾಣುವಿಕೆಯ ಸೌಂದರ್ಯ ಅಲ್ಲವೇ ಅಲ್ಲ. ಬದಲಾಗಿ ಒಳ್ಳೆಯ ಮನಸ್ಸಿನ ಸಂಗಾತಿಯನ್ನೇ ಆರಿಸಿಕೊಳ್ಳಿ. ಜೀವನ ಹಸಿರಾಗಿರುತ್ತದೆ. ಹಾಲು-ಸಕ್ಕರೆಯೂ ಆಗುತ್ತದೆ. ಸಕ್ಕರೆಯೇ ಬೇಕೆಂದು ಹಾಗಲಕಾಯಿಯನ್ನು ದೂರಮಾಡಿಕೊಂಡರೆ, ಈ ವಿಷಯದಲ್ಲಿ ರಿಪ್ಲೇಸ್‌ಮೆಂಟ್ ಇಲ್ಲ!

-ಅಲೆಮಾರಿ.


## ಮುಂಗಾರು ವಿಳಂಬ: ಶಾಶ್ವತ ಟಾಸ್ಕ್ ಫೋರ್ಸ್ ರಚನೆಗೆ ಬಸವರಾಜ ಬೊಮ್ಮಾಯಿ ಆಗ್ರಹ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಪ್ರತಿ ವರ್ಷ ಮಳೆ ಒಂದು ವಾರ ವಿಳಂಬವಾದರೆ ಕೃಷಿಗೆ ದೊಡ್ಡ ಸಮಸ್ಯೆಯಾಗುತ್ತದೆ. ಪ್ರತಿ ಜಿಲ್ಲೆಗೆ 50 ಲಕ್ಷ ರೂ. ಬಿಡುಗಡೆ ಮಾಡಿ, ಶಾಶ್ವತ ಟಾಸ್ಕ್ ಫೋರ್ಸ್ ರಚನೆ ಮಾಡುವಂತೆ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.

ಶೂನ್ಯವೇಳೆಯಲ್ಲಿ ಕಾಂಗ್ರೆಸ್ ಸದಸ್ಯ ಅಲ್ಲಮ ಪ್ರಭು ಪಾಟೀಲ್ ಕೇಳಿದ ಪ್ರಶ್ನೆಗೆ ಬೆಂಬಲಿಸಿ ಮಾತನಾಡಿದ ಅವರು, ಪ್ರತಿ ವರ್ಷ ಒಂದು ವಾರ ಮಳೆ ವಿಳಂಬವಾದರೆ ಕೃಷಿ ಮೇಲೆ ದೊಡ್ಡ ಪರಿಣಾಮ ಬೀರುತ್ತದೆ ಎಂದರು.

ರೈತರು ಬಿತ್ತನೆ ಮಾಡಿದರೂ ಮೊಳಕೆ ಒಡೆಯದಿದ್ದರೆ ಅದಕ್ಕೆ ವಿಮೆ ಕೂಡ ಬರುವುದಿಲ್ಲ. ಹವಾಮಾನ



ಇಲಾಖೆಯ ಮುನ್ಸೂಚನೆ ನಂಬಿ ಕೂಡಬೇಡಿ, ಅವರು ಮುಂದಿನ ಐದು ದಿನ ನಿರಂತರ ಮಳೆ ಅಂತ ಹೇಳಿದ್ದಾರೆ. ಆದರೆ, ಎಲ್ಲ ಕಡೆ ನಿರ್ಧಿಷ್ಟ ಮಳೆ ಆಗುತ್ತಿಲ್ಲ. ನೀವು ವಾಸ್ತವ ನೋಡಿ ಕೆಲಸ ಮಾಡಬೇಕು. ಅದಕ್ಕಾಗಿ ಶಾಶ್ವತ ಟಾಸ್ಕ್ ಫೋರ್ಸ್ ರಚನೆ ಮಾಡಬೇಕು. ಅಲ್ಲದೇ ಪ್ರತಿ ಜಿಲ್ಲೆಗೂ ತಕ್ಷಣ ಐವತ್ತು ಲಕ್ಷ ರೂ.ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು.

## ರಾಜ್ಯದಿಂದ ರಫ್ತು ಹೆಚ್ಚಿಸಲು ಅಂಚೆ ಕಚೇರಿಯಿಂದ 60 ಡಾಕ್ ಕೇಂದ್ರ ಆರಂಭ



■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ರಾಜ್ಯದಿಂದ ರಫ್ತು ಹೆಚ್ಚಿಸಲು, ಕರ್ನಾಟಕ ಪೋಸ್ಟಲ್ ಸರ್ಕಲ್ ತನ್ನ ಎಲ್ಲಾ ಕೇಂದ್ರ ಕಚೇರಿಗಳು ಮತ್ತು ಕೆಲವು ಉಪ ಅಂಚೆ ಕಚೇರಿಗಳಲ್ಲಿ ಇನ್ನೂ 60 ರಫ್ತು ಸೌಲಭ್ಯ ಕೇಂದ್ರಗಳನ್ನು (ಡಾಕ್ ನಿರ್ಯತ್ ಕೇಂದ್ರಗಳು) ತೆರೆಯಲಿದೆ.

ಆಗಸ್ಟ್ 15 ರೊಳಗೆ ಈ ಎಲ್ಲಾ 60 ಕೇಂದ್ರಗಳನ್ನು ಆರಂಭಿಸುವ ಮಹತ್ವಾಕಾಂಕ್ಷೆಯ ಗುರಿಯನ್ನು ಅಂಚೆ ಕಚೇರಿ ಹೊಂದಿದೆ. ಇಂತಹ ಹತ್ತು ಕೇಂದ್ರಗಳು ಪ್ರಸ್ತುತ ಬೆಂಗಳೂರಿನ ಚಾಮರಾಜಪೇಟೆ ಮತ್ತು ದೂರವಾಣಿ ನಗರದಲ್ಲಿ, ಮೈಸೂರಿನ ಸರಸ್ವತಿಪುರಂ, ಚನ್ನಪಟ್ಟಣದಲ್ಲಿ, ಧಾರವಾಡ, ಬಾಗಲಕೋಟೆ, ವಿಜಯಪುರ, ಬೆಳಗಾವಿ ಮತ್ತು ಬೀದರ್‌ನಲ್ಲಿ ಕಾರ್ಯನಿರ್ವಹಿಸುತ್ತಿವೆ.

ಚಾಮರಾಜಪೇಟೆಯಲ್ಲಿ ರಫ್ತು ಕೇಂದ್ರ

"ಪ್ರತಿ ರಾಜ್ಯದಲ್ಲೂ ಇಂತಹ ಕೇಂದ್ರಗಳನ್ನು ಆರಂಭಿಸುವ ಪ್ರಯತ್ನದ ಭಾಗವಾಗಿ ಈಗ ರಾಜ್ಯದಲ್ಲೂ 60 ಕೇಂದ್ರಗಳನ್ನು ತೆರೆಯಲಾಗುತ್ತಿದೆ. ಇದು ತಯಾರಕರಿಗೆ ದೊಡ್ಡ ಉತ್ತೇಜನವನ್ನು ನೀಡುತ್ತದೆ. ನಮ್ಮ ಎಲ್ಲಾ 56 ಪ್ರಧಾನ ಅಂಚೆ ಕಚೇರಿಗಳು ಶೀಘ್ರದಲ್ಲೇ ಇಂತಹ ಕೇಂದ್ರವನ್ನು ಹೊಂದಲಿದ್ದು, ಅವುಗಳಲ್ಲಿ ಮೂರು ಈಗಾಗಲೇ ಕಾರ್ಯನಿರ್ವಹಿಸುತ್ತಿವೆ ಎಂದು ಕರ್ನಾಟಕದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ (ಸಿಪಿಎಂಜಿ) ಎಸ್ ರಾಜೇಂದ್ರ ಕುಮಾರ್ ಅವರು ಬುಧವಾರ ದಿ ನ್ಯೂ ಇಂಡಿಯನ್ ಎಕ್ಸ್ ಪ್ರೆಸ್ ಗೆ ತಿಳಿಸಿದ್ದಾರೆ.

ರಫ್ತು ಮಾಡಬೇಕಾದ ವಸ್ತುಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಬಹುದು ಮತ್ತು ಯಾವುದೇ ನಿರ್ಯತ್ ಕೇಂದ್ರದಲ್ಲಿ ಪಾರ್ಸೆಲ್‌ಗಳನ್ನು ಬುಕ್ ಮಾಡಬಹುದು. ಅವು

ಚಾಮರಾಜಪೇಟೆಯಲ್ಲಿರುವ ವಿದೇಶಿ ಅಂಚೆ ಕಚೇರಿಯಲ್ಲಿ ಕಸ್ಟಮ್ಸ್ ಕ್ಲಿಯರೆನ್ಸ್ ಪಡೆದು ಬೆಂಗಳೂರಿಗೆ ಬರುತ್ತವೆ. "ಈ ಹಿಂದೆ, ವ್ಯಾಪಾರಿಗಳು ಬೆಂಗಳೂರಿಗೆ ಭೌತಿಕವಾಗಿ ಬರಲು ಸಿಬ್ಬಂದಿಯನ್ನು ನಿಯೋಜಿಸಬೇಕಾಗಿತ್ತು ಮತ್ತು ಅವರು ಅಂತರಾಷ್ಟ್ರೀಯ ರವಾನೆಗಳಿಗೆ ಕ್ಲಿಯರೆನ್ಸ್ ಪಡೆಯಬೇಕಾಗಿತ್ತು. ಇನ್ನು ಮುಂದೆ ಈ ರೀತಿ ಮಾಡುವ ಅಗತ್ಯವಿಲ್ಲ" ಎಂದು ರಾಜೇಂದ್ರ ಕುಮಾರ್ ಅವರು ಹೇಳಿದ್ದಾರೆ.

### ಜುಲೈ 10 ರವರೆಗೆ ರಾಜ್ಯದಲ್ಲಿ ಭಾರೀ ಮಳೆ

## ಕರಾವಳಿ ಪ್ರದೇಶದಲ್ಲಿ ರೆಡ್ ಅಲರ್ಟ್; ಜಲಾಶಯಗಳಿಗೆ ಹೆಚ್ಚುತ್ತಿರುವ ಒಳಹರಿವು!

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಕರ್ನಾಟಕದಲ್ಲಿ ಜುಲೈ 10 ರವರೆಗೆ ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದ್ದು, ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಕರಾವಳಿ ಜಿಲ್ಲೆಗಳಿಗೆ ರೆಡ್ ಅಲರ್ಟ್ ಘೋಷಿಸಿದೆ.

ಬಹುನಿರೀಕ್ಷಿತ ಮುಂಗಾರು ಮಳೆ ರಾಜ್ಯಕ್ಕೆ ಆಗಮಿಸಿದ್ದು, ರೈತ ಸಮುದಾಯದಲ್ಲಿ ಸಂತಸ ಮೂಡಿಸಿದೆ. ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಗುರುವಾರ ಬೆಳಿಗ್ಗೆ ತುಂತುರು ಮಳೆ ಸುರಿಯಿತು. ಆದರೆ ನಗರದ ಕೆಲವು ಭಾಗಗಳಲ್ಲಿ ಜಲಾವೃತಗೊಂಡು ಟ್ರಾಫಿಕ್ ಜಾಮ್ ನಿಂದಾಗಿ ಪ್ರಯಾಣಿಕರು ತೊಂದರೆ ಅನುಭವಿಸಿದರು.

ಭಾರೀ ಮಳೆಯ ಸಾಧ್ಯತೆ ಇರುವ ಕಾರಣ ಮೀನುಗಾರರು



ಸಮುದ್ರಕ್ಕೆ ಇಳಿಯದಂತೆ ಎಚ್ಚರಿಕೆ ನೀಡಲಾಗಿದೆ, ಭಾರೀ ಮಳೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬುಧವಾರ ಒಬ್ಬರು ಸಾವನ್ನಪ್ಪಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಭಾರೀ ಗಾಳಿ ಸಹಿತ ಗುಡುಗು ಸಹಿತ ಮಳೆಯಾಗುವ ಮುನ್ಸೂಚನೆ ಇದ್ದು. ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಕಲಬುರ್ಗಿ, ರಾಯಚೂರು, ಚಿಕ್ಕಮಗಳೂರು, ದಾವಣಗೆರೆ, ಕೊಡಗು, ಶಿವಮೊಗ್ಗ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದೆ.

ಮೈಸೂರು, ರಾಮನಗರ ಮತ್ತು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರದಲ್ಲೂ ಮಳೆಯಾಗುವ ನಿರೀಕ್ಷೆಯಿದೆ. ರಾಜ್ಯದಲ್ಲಿ ಮಳೆ ಕೊರತೆಯಿಂದ ಬತ್ತಿ ಹೋಗಿದ್ದ ಅಣೆಕಟ್ಟುಗಳು, ಜಲಾಶಯಗಳು ಭರ್ತಿಯಾಗತೊಡಗಿವೆ.

ಕೆಆರ್ ಎಸ್ ಅಣೆಕಟ್ಟೆಯಲ್ಲಿ ನೀರಿನ ಮಟ್ಟ 10.17 ಟಿಎಂಸಿ ತಲುಪಿದೆ. ಕಳೆದ ವರ್ಷ ಈ ಬಾರಿ 34.06 ಟಿಎಂಸಿ ನೀರು ಇತ್ತು. 1,249 ಕ್ಯೂಸೆಕ್ ಒಳಹರಿವು ದಾಖಲಾಗಿದೆ.

## ಚಾಲಕ ಆತ್ಮಹತ್ಯೆ ಯತ್ನ : ಚಲುವರಾಯಸ್ವಾಮಿ ರಾಜೀನಾಮೆಗೆ ಆಗ್ರಹ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಸಚಿವರೊಬ್ಬರ ಒತ್ತಡದಿಂದ ವಿನಾಕಾರಣ ತನ್ನನ್ನು ವರ್ಗಾವಣೆ ಮಾಡಿದ್ದಾರೆ ಎಂದು ಆರೋಪಿಸಿ ಮಂಡ್ಯ ಜಿಲ್ಲೆಯ ನಾಗಮಂಗಲ ಕೆಎಸ್‌ಆರ್‌ಟಿಸಿ ಡಿಪೋ ಚಾಲಕ ಕಮ್ ಕಂಡಕ್ಟರ್ ಜಗದೀಶ್ ಅವರು ಆತ್ಮಹತ್ಯೆಗೆ ಯತ್ನಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಗುರುವಾರ ವಿಧಾನಸಭೆ ಕೋಲಾಹಲ ಸೃಷ್ಟಿಯಾಗಿತ್ತು.

ಸದನದಲ್ಲಿ ವಿಷಯ ಪ್ರಸ್ತಾಪಿಸಿದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಜಿಲ್ಲಾ ಉಸ್ತುವಾರಿ ಸಚಿವರ ಒತ್ತಡದಿಂದ ಜಗದೀಶ್ ಅವರನ್ನು ವರ್ಗಾವಣೆ ಮಾಡಲಾಗಿದೆ. ಹೀಗಾಗಿ ಅವರು ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಘಟನೆ ನಡೆದು ಒಂದು ದಿನ ಕಳೆದರೂ ಎಫ್‌ಐಆರ್ ದಾಖಲಿಸಿಲ್ಲ. ಕೃಷಿ ಸಚಿವ ಎನ್ ಚಲುವರಾಯಸ್ವಾಮಿ ಅವರನ್ನು ಸರ್ಕಾರ ರಕ್ಷಿಸುತ್ತಿದೆ. ತಕ್ಷಣ ಅವರ ರಾಜೀನಾಮೆ ಪಡೆಯಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಉದ್ಯೋಗಿ ಬೆಂಗಳೂರಿನ ಆಸ್ಪತ್ರೆಯಲ್ಲಿ ಸಾವು ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದರೂ ಪೊಲೀಸರು ಇನ್ನೂ ಪ್ರಕರಣ ದಾಖಲಿಸಿಕೊಂಡಿಲ್ಲ ಎಂದು ಆರೋಪಿಸಿದರು.

ಸರ್ಕಾರಿ ಅಧಿಕಾರಿಗಳು ಸಂಕಷ್ಟದಲ್ಲಿದ್ದಾರೆ ಎಂಬುದನ್ನು ಈ ಘಟನೆ ತೋರಿಸುತ್ತದೆ. ಇದನ್ನೇ ಜನ ದಿನನಿತ್ಯ ಮಾತನಾಡಿಕೊಳ್ಳುತ್ತಿದ್ದಾರೆ ಎಂದು ಬೊಮ್ಮಾಯಿ ಹೇಳಿದರು.

ಈ ಹಿಂದೆಗುತ್ತಿಗೆದಾರರೊಬ್ಬರು 40 ಪರ್ಸೆಂಟ್ ಕಮಿಷನ್ ಆರೋಪ ಮಾಡಿ ಆತ್ಮಹತ್ಯೆ ಮಾಡಿಕೊಂಡಾಗ ಬಿಜೆಪಿ ಸಚಿವ ಕೆಎಸ್ ಈಶ್ವರಪ್ಪ ರಾಜೀನಾಮೆ ನೀಡಿದ್ದರು ಎಂದು ಮಾಜಿ ಸಿಎಂ ಹೇಳಿದರು.


ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಮಾಜಿ ಮುಖ್ಯಮಂತ್ರಿ, ಜೆಡಿಎಸ್ ಮುಖಂಡ ಎಚ್ ಡಿ ಕುಮಾರಸ್ವಾಮಿ, ಸರ್ಕಾರ ಅಧಿಕಾರಕ್ಕೆ ಬಂದ 50 ದಿನಗಳಲ್ಲಿ ಇಂತಹ ಘಟನೆಗಳು ನಡೆಯುತ್ತಿವೆ. ರಾಜ್ಯದ ಕೆಲವು ಭಾಗಗಳಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆ ಕಾರಣಕ್ಕೆ ಒತ್ತಡ ಹಾಕಿ ವರ್ಗಾವಣೆ ಮಾಡಿರುವುದೇ ಜಗದೀಶ್ ಆತ್ಮಹತ್ಯೆ ಯತ್ನಕ್ಕೆ ಕಾರಣ ಎಂದು ಆರೋಪಿಸಿದರು.

## ಸ್ಪೀಕರ್ ಒಪ್ಪಿದರೆ ಸದನದಲ್ಲೇ ಆಡಿಯೋ ಕೇಳಿಸುತ್ತೇನೆ: ಎಚ್‌ಡಿಕೆ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ರಾಜ್ಯ ಸರ್ಕಾರದ ಭ್ರಷ್ಟಾಚಾರದ ಪುರಾವೆ ಇರುವ ಪೆನ್ ಡ್ರೈವ್ ತಮ್ಮ ಜೇಬಿನಲ್ಲಿದೆ ಎಂದಿದ್ದ ಜೆಡಿಎಸ್ ನಾಯಕ, ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು, ಸ್ಪೀಕರ್ ಯುಟಿ ಖಾದರ್ ಅವರು ಒಪ್ಪಿದರೆ ಸದನದಲ್ಲೇ ಪೆನ್‌ಡ್ರೈವ್ ಪ್ರದರ್ಶನ ಮಾಡುತ್ತೇನೆ ಮತ್ತು ಇಲ್ಲೇ ಆಡಿಯೋ ಹಾಕಿಸುತ್ತೇನೆ ಎಂದು ಗುರುವಾರ ಹೇಳಿದ್ದಾರೆ.

ಇಂದು ವಿಧಾನಸಭೆಯಲ್ಲಿ ಇಂಧನ ಇಲಾಖೆಯಲ್ಲಿ ವರ್ಗಾವಣೆ ದಂಧೆ ನಡೆದಿದೆ ಎಂದು ಆರೋಪಿಸುತ್ತಿರುವ ಎಚ್ ಡಿ ಕುಮಾರಸ್ವಾಮಿ ಮತ್ತು ಇಂಧನ ಸಚಿವ ಕೆ.ಜೆ.ಜಾರ್ಜ್ ಅವರ ನಡುವೆ ತೀವ್ರ ವಾಗ್ವಾದ ನಡೆಯಿತು.



ನನ್ನ ಬಳಿ ಪೆನ್‌ಡ್ರೈವ್ ಇದೆ, ಅದರಲ್ಲಿ ಸಾಕ್ಷ್ಯವಿದೆ ಎಂದು ಹೇಳುತ್ತಿದ್ದೀರಿ. ನಿಮ್ಮ ಬಳಿ ಯಾವ ಸಾಕ್ಷ್ಯವಿದೆ, ಅದನ್ನು ಸ್ಪೀಕರ್‌ಗೆ ನೀಡಿ ಎಂದು ಕುಮಾರಸ್ವಾಮಿ ಅವರಿಗೆ ಕೆ.ಜೆ.ಜಾರ್ಜ್ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ಪೆನ್‌ಡ್ರೈವ್ ನಲ್ಲಿರುವ ಸಾಕ್ಷ್ಯ ವೀಕ್ಷಣೆಗೆ ಸದನದಲ್ಲಿ ವ್ಯವಸ್ಥೆ ಮಾಡಿ. ಸ್ಪೀಕರ್ ಒಪ್ಪಿಗೆ ಕೊಟ್ಟರೆ ಸದನದಲ್ಲೇ ಪೆನ್ ಡ್ರೈವ್ ಪ್ರದರ್ಶನ ಮಾಡುತ್ತೇನೆ ಎಂದು ತಿರುಗೇಟು ನೀಡಿದರು.

ಈ ವೇಳೆ ಎಚ್ .ಡಿ.ಕುಮಾರಸ್ವಾಮಿ ಅವರಿಗೆ ಬಿಜೆಪಿ ಸದಸ್ಯರು ಬೆಂಬಲ ಸೂಚಿಸಿದರು. ವಿಧಾನಸಭೆಯಲ್ಲಿ ಎಚ್‌ಡಿಕೆ ಮತ್ತು ಕಾಂಗ್ರೆಸ್ ಸದಸ್ಯರ ನಡುವೆ ವಾಗ್ವಾದ ನಡೆಯುತ್ತಿದೆ.

## ಬಾಬು ಜಗಜೀವನ್ ರಾಮ್ ಸಮಾಜಮುಖಿ ಕೆಲಸಗಳು ಚಿರಸ್ಥಾಯಿ- ಸಿಎಂ ಸಿದ್ದರಾಮಯ್ಯ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಬಾಬು ಜಗಜೀವನ್ ರಾಂ ಅವರ ಸಮಾಜಮುಖಿ ಕೆಲಸಗಳು ಚಿರಸ್ಥಾಯಿಯಾಗಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಹಸಿರು ಕ್ರಾಂತಿಯ ಹರಿಹಾರ, ರಾಷ್ಟ್ರನಾಯಕ ಹಾಗೂ ಭಾರತದ ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ್ ರಾಮ್ ರವರ 37 ನೇ ಪುಣ್ಯಸ್ಮರಣೆ ಅಂಗವಾಗಿ ವಿಧಾನಸೌಧದ ಪಶ್ಚಿಮದ್ವಾರ ಬಳಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಮುಖ್ಯಮಂತ್ರಿ, ಸ್ವಾತಂತ್ರ್ಯ ಭಾರತದಲ್ಲಿ ನೆಹರು ಅವರ ಸಂಪುಟದಲ್ಲಿ ಮಂತ್ರಿಯಾಗಿದ್ದ, ದೇಶದ ಮೊದಲ ಉಪ ಪ್ರಧಾನಿಯಾಗಿದ್ದ ಬಾಬು



ಜಗಜೀವನ್ ರಾಮ್ ಅವರು, ದಕ್ಷ ಆಡಳಿತಗಾರರು. ಹಸಿರು ಕ್ರಾಂತಿಯ ಮೂಲಕ ದೇಶದಲ್ಲಿ ಆಹಾರ ಸ್ವಾಲಂಬಲನೆಯಾಗಲು ಕಾರಣಕರ್ತರು ಎಂದರು.

ಯಾವುದೇ ಇಲಾಖೆಯಲ್ಲಿದ್ದರೂ ತಳಸಮುದಾಯದ ಜನರಿಗೆ ಸಂವಿಧಾನಬದ್ಧ ನ್ಯಾಯ ದೊರಕಿಸಲು ಹೋರಾಡಿದರು. ಅವರ ಬದುಕು ನಮಗೆ ಪ್ರೇರಣೆಯಾಗಬೇಕು ಎಂದರು. ಅಂಥ ಮಹಾನುಭಾವರ ಪುಣ್ಯಸ್ಮರಣೆ ಮಾಡಿದ್ದು, ಅವರು ನಮಗೆಲ್ಲರಿಗೂ ಮಾರ್ಗದರ್ಶಕರು. ಅವರ ಮಾರ್ಗದಲ್ಲಿ ನಡೆಯುವ ಪ್ರಯತ್ನವೇ ನಾವು ಅವರಿಗೆ ಸಲ್ಲಿಸುವ ಗೌರವ ಎಂದರು.

## ವಿಧಾನಸಭೆ ಉಪಸಭಾಧ್ಯಕ್ಷರಾಗಿ ರುದ್ರಪ್ಪ ಲಮಾಣಿ ಅವಿರೋಧವಾಗಿ ಆಯ್ಕೆ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು:

ವಿಧಾನಸಭೆಯ 25ನೇ ಉಪಸಭಾಧ್ಯಕ್ಷರಾಗಿ ರುದ್ರಪ್ಪ ಮಾನಪ್ಪ ಲಮಾಣಿ, ಗುರುವಾರ ಸರ್ವಾನುಮತದಿಂದ ಅವಿರೋಧವಾಗಿ ಆಯ್ಕೆಯಾದರು. ವಿಧಾನಸಭೆಯಲ್ಲಿಂದು ಪ್ರಶ್ನೋತ್ತರ ಅವಧಿಯ ನಂತರ ನಡೆದ ಉಪಸಭಾಧ್ಯಕ್ಷರ ಆಯ್ಕೆ ಪ್ರಕ್ರಿಯೆಯಲ್ಲಿ ರುದ್ರಪ್ಪ ಲಮಾಣಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಪ್ರಕಟಿಸಿದರು.

ಸರಕಾರದ ಮುಖ್ಯ ಸಚೇತಕ ಅಶೋಕ ಪಟ್ಟಣ ಅವರು ಉಪಸಭಾಧ್ಯಕ್ಷ ಸ್ಥಾನಕ್ಕೆ ರುದ್ರಪ್ಪ ಲಮಾಣಿ ಅವರ ಹೆಸರನ್ನು ಸೂಚಿಸಿದರು.

ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲೂಕಿನ ಖಂಡೇರಾಯನಹಳ್ಳಿಯ ರುದ್ರಪ್ಪ ಮಾನಪ್ಪ ಲಮಾಣಿ ಮೂರು ಬಾರಿ ಶಾಸಕರಾಗಿ ಮತ್ತು ಸಚಿವರಾಗಿ ಕೆಲಸ ನಿರ್ವಹಿಸಿದ ಅನುಭವ ಹೊಂದಿದ್ದಾರೆ.



ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಿಧಾನಸಭೆಯ ಉಪಸಭಾಧ್ಯಕ್ಷರಾಗಿ ಆಯ್ಕೆಯಾದ ರುದ್ರಪ್ಪ ಲಮಾಣಿ ಅವರ ಬಳಿ ತೆರಳಿ ಉಪಸಭಾಧ್ಯಕ್ಷರ ಸ್ಥಾನಕ್ಕೆ ಕರೆದುಕೊಂಡು ಬಂದರು.

ನಂತರ ಮಾತನಾಡಿದ ಡಿ.ಕೆ.ಶಿವಕುಮಾರ್, 1999ರಿಂದ ವಿಧಾನಸಭೆಗೆ ಬಂದಿರುವ ರುದ್ರಪ್ಪ ಮಾನಪ್ಪ ಲಮಾಣಿ, ಮಂತ್ರಿಗಿರಿ ಸೇರಿದಂತೆ ಪಕ್ಷದ ಅನೇಕ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸಿದ್ದಾರೆ ಮತ್ತು ಎಲ್ಲರಿಂದ ಅಜಾತಶತ್ರು ಎಂದು ಹೆಸರುಗಳಿಸಿಕೊಂಡಿದ್ದಾರೆ. ಇವರ ಅವಧಿಯಲ್ಲಿ ಎಲ್ಲರಿಗೂ ನ್ಯಾಯ ಸಿಗಲಿ. ಹೊಸ ಹೊಸ ನಾಯಕರನ್ನು ತಯಾರು ಮಾಡಲಿ.

ಈ ದೊಡ್ಡ ಸ್ಥಾನವನ್ನು ಸಮರ್ಪಕವಾಗಿ ನಿರ್ವಹಿಸುವುದರ ಮೂಲಕ ಎಲ್ಲರ ಹೃದಯವನ್ನು ಗೆಲ್ಲಲಿ ಎಂದು ಶುಭಹಾರೈಸಿದರು.

## ಕುಮಾರಸ್ವಾಮಿಯವರ ಆರೋಪಕ್ಕೆ ಸದನದಲ್ಲಿ ಉತ್ತರ: ಸಿಎಂ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಜೆಡಿಎಸ್ ನಾಯಕ ಹೆಚ್ ಡಿ ಕುಮಾರಸ್ವಾಮಿಯವರು ಹತಾಶೆ, ದ್ವೇಷದಿಂದ ಹೀಗೆಲ್ಲಾ ಮಾತನಾಡುತ್ತಿದ್ದಾರೆ. ಹೊಸ ಸರ್ಕಾರ ರಚನೆಯಾದ ಮೇಲೆ ವರ್ಗಾವಣೆಯಾಗುವುದು ಸಾಮಾನ್ಯ. ಅದರಲ್ಲಿ ದಂಧೆ, ಲಂಚ ನಡೆದಿದೆ ಎನ್ನುವುದು ಸುಳ್ಳು ಆರೋಪ ಎಂದು ಸಿಎಂ ಸಿದ್ದರಾಮಯ್ಯ ಮಾಜಿ ಸಿಎಂ ಕುಮಾರಸ್ವಾಮಿ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ್ದಾರೆ.

ಇಂದು ವಿಧಾನ ಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುಮಾರಸ್ವಾಮಿಗಳು ಮುಖ್ಯಮಂತ್ರಿಗಳಾಗಿದ್ದ ಸಮಯದಲ್ಲಿ ವರ್ಗಾವಣೆಯಾಗಿರಲಿಲ್ಲವೇ, ಆಗ ಅವರು ಲಂಚ ತೆಗೆದುಕೊಂಡಿದ್ದರೇ, ಟ್ರಾನ್ಸ್ ಫರ್ ಆದಾಗ ದುಡ್ಡು ತಗೊಂಡಿದ್ದಾರೆ, ಲಂಚ ತೆಗೆದುಕೊಂಡಿದ್ದಾರೆ ಎನ್ನುವುದು ಕೇವಲ ಊಹೆಯಷ್ಟೇ ಎಂದರು.

ಆಡಳಿತಾತ್ಮಕ ದೃಷ್ಟಿಯಿಂದ ಸಾಮಾನ್ಯ ವರ್ಗಾವಣೆ ಪ್ರಕ್ರಿಯೆ ನಡೆಯುತ್ತದೆ. ಮಾರ್ಚ್ ಏಪ್ರಿಲ್ ತಿಂಗಳಲ್ಲಿ ಎಲೆಕ್ಷನ್ ಎಂದು ವರ್ಗಾವಣೆಗಳು ಆಗಿರಲಿಲ್ಲ, ಈಗ ನಡೆಯುತ್ತಿರುವ ಸರ್ಕಾರಿ ಅಧಿಕಾರಿಗಳ ವರ್ಗಾವಣೆ ಸಾಮಾನ್ಯ ಪ್ರಕ್ರಿಯೆ ಎಂದರು. ಕುಮಾರಸ್ವಾಮಿ ಹಿಟ್ ಅಂಡ್ ರನ್ ಕೇಸು: ಕುಮಾರಸ್ವಾಮಿಯವರು ಯಾವಾಗಲೂ ಹಿಟ್ ಅಂಡ್ ರನ್ ಕೇಸು, ಅವರು ಇದುವರೆಗೆ ಮಾಡಿರುವ ಆರೋಪಗಳನ್ನು ತಾತ್ವಿಕವಾಗಿ ಕೊನೆಯವರೆಗೆ ತೆಗೆದುಕೊಂಡು ಹೋಗಿದ್ದಾರೆಯೇ, ಸರಿಯಾದ ಸಮಯಕ್ಕೆ ದಾಖಲೆ ಬಿಡುಗಡೆ ಮಾಡಲಿ ನೋಡೋಣ, ನಾವು ಆಗ ಉತ್ತರ ಕೊಡುತ್ತೇವೆ ಎಂದರು.


### ನೀವೂ ನಮ್ಮ ಜೊತೆ ಕೈಜೋಡಿಸಿ

'ವಿಜಯಸಾಕ್ಷಿ'

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.

ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..

ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.

E-mail: vijayasakshidaily@gmail.com

ಮೊ : 9019256545

## ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿ ಸಂಗೀತ ಶಿಕ್ಷಕಿ ದೇವಿಕಾ ಜೋಗಿ ನೇಮಕ



■ ವಿಜಯಸಾಕ್ಷಿ ಸುದ್ದಿ, ಗದಗ

ಪೂಜ್ಯರ ಅಭಿಮಾನಿ ಭಕ್ತರ ಮಹಾಬಳಗವಾದ ಡಾ. ಪಂ. ಪುಟ್ಟರಾಜ ಸೇವಾ ಸಮಿತಿಯ ಆಜೀವ ಸದಸ್ಯರಾಗಿ ಸಲ್ಲಿಸಿದ ಸೇವೆ, ಪೂಜ್ಯರ ಮೇಲಿಟ್ಟಿರುವ ಭಕ್ತಿ, ಸಮಾಜ ಸೇವೆ, ಸಂಸ್ಕೃತಿ ಚಿಂತನೆಯನ್ನು ಗುರುತಿಸಿ ಹೊಸಪೇಟೆಯ ದೇವಿಕಾ ಜೋಗಿ ಇವರನ್ನು ಡಾ. ಪಂ. ಪುಟ್ಟರಾಜ ಸೇವಾ ಸಮಿತಿಯ ಮಹಿಳಾ ಘಟಕದ ಸಂಘಟನಾ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಲಾಗಿದೆ ಎಂದು ಗದುಗಿನ ಡಾ. ಪಂ. ಪುಟ್ಟರಾಜ ಸೇವಾ ಸಮಿತಿಯ ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ವೇ. ಚನ್ನವೀರ ಸ್ವಾಮಿ ಹಿರೇಮಠ (ಕಡಣಿ) ಇವರು ತಿಳಿಸದ್ದಾರೆ.

ತಮ್ಮ ಅಧಿಕಾರದ ಅವಧಿಯಲ್ಲಿ ತಮ್ಮದೆ ಸಮಾನ ಮನಸ್ಕ ಆಪ್ತಬಳಗವನ್ನು ಈ ಸಮಿತಿಯ ಸದಸ್ಯರಾಗಿ ಮಾಡುವ, ರಾಜ್ಯದ್ಯಾಂತ ಸೇವಾ ಸಮಿತಿಯ ಮಹಿಳಾ ಘಟಕಗಳನ್ನು ಅಸ್ಥಿತ್ವಕ್ಕೆ ತರುವ ವಿಶ್ವಾಸವನ್ನು ಹೊಂದಿದ್ದೇವೆ.

ಡಾ. ಪಂ. ಪುಟ್ಟರಾಜರ ಜೀವನ ಸಾಧನೆ ಸಂದೇಶವನ್ನು ಮತ್ತು ಅವರ ಸಾಹಿತ್ಯ ಪ್ರಚಾರ ಮತ್ತು ಪ್ರಸಾರದೊಂದಿಗೆ ಭಕ್ತಿ ಪಂಥದ ಕವಿ, ಗಾಯಕರಿಗೆ ವೇದಿಕೆಯಾಗಿ ಕಾರ್ಯ ನಿರ್ವಹಿಸುವ ಮೂಲಕ, ಗುರು ಸೇವೆ ಮಾಡುವ ಭಾಗ್ಯ ತಮ್ಮ ಪೂರ್ವ ಜನ್ಮದ ಸುಕೃತವೆಂದು ಭಾವಿಸಲಾಗಿದೆ ಎಂದು ಆದೇಶ ಪತ್ರದಲ್ಲಿ ತಿಳಿಸಿದ್ದಾರೆ.

### ಉತ್ತರ ಕರ್ನಾಟಕ ಮಹಾಸಭಾದಿಂದ ಜಿಲ್ಲಾಡಳಿತ ಕಚೇರಿಯೆದುರು ಅಹೋರಾತ್ರಿ ಧರಣಿ ಸತ್ಯಾಗ್ರಹ

# ರೈತರ ಬೇಡಿಕೆ ಈಡೇರುವವರೆಗೂ ಹೋರಾಟ

■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಹೊರ ವಲಯದಲ್ಲಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯಕ್ಕಾಗಿ ಜಮೀನು ಕಳೆದುಕೊಂಡ ರೈತರು, ಬಗರ್ ಹುಕುಂ ಸಾಗುವಳಿದಾರರು ಹಾಗೂ ಅರಣ್ಯ ಅವಲಂಬಿತರ ಬೇಡಿಕೆಯನ್ನು ಈಡೇರಿಸುವಂತೆ ಒತ್ತಾಯಿಸಿ ಗುರುವಾರ ಉತ್ತರ ಕರ್ನಾಟಕ ಮಹಾಸಭಾದ ಸಹಯೋಗದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಕಿತ್ತೂರು ಚೆನ್ನಮ್ಮ ವೃತ್ತದಿಂದ ಜಿಲ್ಲಾಡಳಿತ ಕಛೇರಿಯವರೆಗೂ ಪಾದಯಾತ್ರೆಯ ಮೂಲಕ ಡೊಳ್ಳು ಬಾರಿಸುತ್ತ ಪ್ರತಿಭಟನೆ ನಡೆಸಿ, ಗ್ರಾಮೀಣಾಭಿವೃದ್ಧಿ-ಪಂಚಾಯತ್ ರಾಜ್ ವಿಶ್ವವಿದ್ಯಾಲಯಕ್ಕೆ ಜಾಗ ನೀಡಿದ ರೈತರಿಗೆ ಪರಿಹಾರ ನೀಡದಿದ್ದಕ್ಕೆ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರವನ್ನು ನೀಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಉತ್ತರ ಕರ್ನಾಟಕ ಮಹಾಸಭಾದ ರಾಜ್ಯಾಧ್ಯಕ್ಷ ರವಿಕಾಂತ ಅಂಗಡಿ ಮಾತನಾಡಿ, ಜೂನ್ 26ರಂದು ಒಂದು ದಿನ ಧರಣಿ ನಡೆಸಿ, ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಗಿತ್ತು. ಆದರೆ, ಜಿಲ್ಲಾಡಳಿತ ಯಾವುದೇ ಉತ್ತರ ನೀಡದಿರುವುದರಿಂದ ಧರಣಿ ಹಮ್ಮಿಕೊಳ್ಳಲಾಗಿದೆ. ಕಂದಾಯ ಇಲಾಖೆ ರಾಜಕೀಯ ವ್ಯಕ್ತಿಗಳ ಜತೆ ಶಾಮೀಲಾಗಿ ರೈತರ ನೂರಾರು ಎಕರೆ ಜಮೀನು ವಶಪಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಅಕ್ರಮ ಎಸಗಿದೆ ಎಂದು ಆರೋಪಿಸಿದರು.



> ರೈತರಿಂದ ಕೃಷಿಭೂಮಿಯನ್ನು ಕಸಿದು, ಅವರನ್ನು ಬೀದಿಪಾಲು ಮಾಡುತ್ತಿರುವುದು ಖಂಡನೀಯ. ವಿವಿ ಸ್ಥಾಪನೆಗೂ ಮೊದಲು ಹಕ್ಕುಪತ್ರ, ಪರಿಹಾರ ನೀಡಲು ಸಾಕಷ್ಟು ಬಾರಿ ಜಿಲ್ಲಾಡಳಿತಕ್ಕೆ ರೈತರು ಮನವಿ ಮಾಡಿದ್ದರೂ ಸೂಕ್ತ ಸ್ಪಂದನೆ ಸಿಕ್ಕಿಲ್ಲ. ರೈತರ ಬದುಕನ್ನು ತುಳಿಯುವ ಬೆಳವಣಿಗೆ ಇದಾಗಿದೆ. ರೈತರ ಬೇಡಿಕೆ ಈಡೇರುವವರೆಗೂ ನಮ್ಮ ಧರಣಿಯನ್ನು ಕೈಬಿಡುವುದಿಲ್ಲ.
>
> **– ರವಿಕಾಂತ ಅಂಗಡಿ,**
> ರಾಜ್ಯಾಧ್ಯಕ್ಷರು, ಉತ್ತರ ಕನಾಟಕ ಮಹಾಸಭಾ.

ರೈತರಿಗೆ ಅರಣ್ಯ ಇಲಾಖೆ ವಿನಾಕಾರಣ ತೊಂದರೆ ನೀಡುತ್ತಿದೆ. ಕೆಲೂರು, ಡೋಣಿ, ಶಿಂಗಟಾಯನಕೇರಿ, ಅತ್ತಿಕಟ್ಟಿ, ಬಿಡನಾಳ, ವಿರಪಾಪುರ ತಾಂಡಾ, ಮುರಡಿ, ದೇವಿಹಾಳ ಸೇರಿದಂತೆ ಹತ್ತಾರು ಹಳ್ಳಿಗಳಲ್ಲಿ ಬಗರ್ ಹುಕುಂ ಸಾಗುವಳಿದಾರರು ಇದ್ದಾರೆ. ಸರಕಾರ ಈ ರೈತರ ಬಗ್ಗೆ ಕಾಳಜಿ ವಹಿಸಬೇಕು ಎಂದು ಒತ್ತಾಯಿಸಿದರು.

ನಾಗಾವಿ ಗ್ರಾಮದಲ್ಲಿ ಸಾಗುವಳಿ ಮಾಡುತ್ತಿದ್ದ ಜಮೀನುಗಳನ್ನು ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಿ ರೈತರನ್ನು ಬೀದಿಪಾಲು ಮಾಡಲಾಗಿದೆ. ಯೋಜನಾ ನಿರಾಶ್ರಿತರೆಂದು ಘೋಷಿಸಿ ಪರಿಹಾರ ನೀಡುವುದು ಮತ್ತು ಬಗರ್ ಹುಕುಂ ಸಾಗುವಳಿದಾರರು, ಅರಣ್ಯ ಅವಲಂಬಿತರ ಜಮೀನುಗಳ ತಿರಸ್ಕೃತ ಅರ್ಜಿಗಳನ್ನು ಪುನಃ ಪರಿಶೀಲಿಸುವುದು, ಹೊಸ ಅರ್ಜಿಗಳ ಸ್ವೀಕಾರ ಮತ್ತು ಹಕ್ಕುಪತ್ರಗಳ ವಿತರಣೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಮುಖಂಡರಾದ ಬಸವಣೆಪ್ಪ ಚಿಂಚಲಿ, ಎನ್ ಟಿ ಪೂಜಾರ, ಪಿರೋಜ ನದಾಫ್, ರಾಜು ಲಮಾಣಿ, ಶರಣು ಚಿಂಚಲಿ, ಶಾಂತವ್ವ ಕಗ್ಗೂರು ಸೇರಿದಂತೆ ವಿವಿಧ ಹಳ್ಳಿಗಳ ರೈತರು, ಬಗರ ಹುಕುಂ ಸಾಗುವಳಿದಾರರು, ಅರಣ್ಯ ಅವಲಂಬಿತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

### ನಿಜಸುಖಿ ಹಡಪದ ಅಪ್ಪಣ್ಣ-ಲಿಂಗಮ್ಮರ ಸಂಸ್ಮರಣೆ ಕಾರ್ಯಕ್ರಮದಲ್ಲಿ ಮಹಾದೇವ ಹಡಪದ ಅಭಿಮತ

# ವಚನಗಳು ಅಜ್ಞಾನಿಗಳಿಗೆ ದಾರಿದೀಪ



■ ವಿಜಯಸಾಕ್ಷಿ ಸುದ್ದಿ, ಧಾರವಾಡ

ಹಡಪದ ಅಪ್ಪಣ್ಣನವರು 12ನೇ ಶತಮಾನದ ಸಾಮಾಜಿಕ ಕ್ರಾಂತಿಯ ಹರಿಕಾರರಾಗಿದ್ದರಲ್ಲದೇ ಇಡೀ ಶರಣ ಸಂಕುಲಕ್ಕೆ ಅವರು ಧೃವತಾರೆಯಂತಿದ್ದರು ಎಂದು ರಂಗ ಕಲಾವಿದ ಮಹಾದೇವ ಹಡಪದ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ನಿಜಸುಖಿ ಹಡಪದ ಅಪ್ಪಣ್ಣ ಹಾಗೂ ಲಿಂಗಮ್ಮರ ಸಂಸ್ಮರಣೆಯ ದತ್ತಿ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು.

ಹಡಪದ ಅಪ್ಪಣ್ಣನವರು ರಚಿಸಿದ 250ಕ್ಕೂ ಹೆಚ್ಚು ವಚನಗಳು ಬೆಡಗಿನ ವಚನಗಳಾಗಿದ್ದು, ವೈಚಾರಿಕ ನೆಲೆಗಟ್ಟಿನ ಮೇಲೆ ರಚನೆಯಾಗಿವೆ. ಕಾಲಜ್ಞಾನದ ವಚನಗಳು ಅರಿವಿನ ಬೆಳಕು ತೋರುವ ಹಾಗೂ ಆತ್ಮ ಪರಿಶೋಧನೆ ಮಾಡಿಕೊಳ್ಳುವಂತಿವೆ. ಅಪ್ಪಣ್ಣನವರಿಗೆ ಸೇವೆಯೇ ಜೀವನದ ಪರಮ ಗುರಿಯಾಗಿತ್ತು. ಶರಣರು ರಚಿಸಿದ ವಚನ ಸಾಹಿತ್ಯ ಉತ್ಕೃಷ್ಟ ಸಾಹಿತ್ಯವಾಗಿದ್ದು, ಅದು ಮಹಾಕಾವ್ಯವಾಗಿ ರೂಪಗೊಳ್ಳದೇ ಇರುವುದು ವಿಷಾದನೀಯ.

ದತ್ತಿದಾನಿ ಪ್ರೊ. ಭೀಮರಾಯ ಹಡಪದ ಮಾತನಾಡಿ, ಹಡಪದ ಅಪ್ಪಣ್ಣನವರು ಆ ಕಾಲದ ಸಮಾಜದ ಅಂಕು-ಡೊಂಕುಗಳನ್ನು, ಕಂದಾಚಾರಗಳನ್ನು ವಚನಗಳ ಮೂಲಕ ತಿದ್ದುವ ಕಾರ್ಯ ಮಾಡಿದರು. ಅವರ ವಚನಗಳು ದೃಷ್ಟಾಂತದಿಂದ ಕೂಡಿವೆ. ಬಸವಣ್ಣನವರ ಜೀವನದ ಒಡನಾಡಿಯಾದ ಅಪ್ಪಣ್ಣ ಹಾಗೂ ಲಿಂಗಮ್ಮರು ನಮಗೆಲ್ಲಾ ಸ್ಮರಣೀಯರು ಎಂದು ಹೇಳಿದರು.

> ಹಡಪದ ಅಪ್ಪಣ್ಣನವರು ಬಸವಣ್ಣನವರ ಬಾಲ್ಯದ ಒಡನಾಡಿಯಾಗಿದ್ದು, ಅವರ ಸ್ವಾಮಿನಿಷ್ಠೆ ಹಾಗೂ ಕಾರ್ಯತತ್ಪರತೆಯನ್ನು ಕಂಡು ಬಸವಣ್ಣನವರು ಅವರನ್ನು ತಮ್ಮ ಆಪ್ತ ಕಾರ್ಯದರ್ಶಿಯನ್ನಾಗಿ ಹಾಗೂ ಅನುಭವ ಮಂಟಪದ ಕಾರ್ಯದರ್ಶಿಯನ್ನಾಗಿ ನೇಮಿಸಿದ್ದರು. ಅಪ್ಪಣ್ಣ ಹಾಗೂ ಲಿಂಗಮ್ಮರ ವಚನಗಳು ಅಜ್ಞಾನಿಗಳಿಗೆ ಹಾಗೂ ಶೋಷಿತರಿಗೆ ದಾರಿದೀಪವಾಗಿವೆ. ಶರಣ ಸಂಕುಲ ತಮ್ಮ ವಚನಗಳ ಮೂಲಕ ಇನ್ನೂ ಜೀವಂತವಾಗಿದ್ದಾರೆ.
>
> **– ಮಹಾದೇವ ಹಡಪದ.**
> ರಂಗ ಕಲಾವಿದ.

ಕವಿವ ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವೇದಿಕೆಯಲ್ಲಿ ಸುಮಾ ಹಡಪದ ಇದ್ದರು. ಶಂಕರ ಕುಂಬಿ ಸ್ವಾಗತಿಸಿ, ನಿರೂಪಿಸಿದರು. ವೀರಣ್ಣ ಒಡ್ಡೀನ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಜಿನದತ್ತ ಹಡಗಲಿ ವಂದಿಸಿದರು.

ಕಾರ್ಯಕ್ರಮದಲ್ಲಿ ಶಂಕರ ಹಡಪದ, ಮಹಾಂತೇಶ ಹಡಪದ, ಶಿವಾನಂದ ಹಡಪದ, ಮಧುಮತಿ ಸಣಕಲ್, ಎಂ ಎಸ್ ನರೇಗಲ್ ಸೇರಿದಂತೆ ಸಮಾಜದ ಮುಖಂಡರು ಇದ್ದರು.

## ಬಸವೇಶ್ವರ ಪದವಿ ಮಹಾವಿದ್ಯಾಲಯದ ಬಿ.ಎ ವಿದ್ಯಾರ್ಥಿಗಳ ಸಾಧನೆ

■ ವಿಜಯಸಾಕ್ಷಿ ಸುದ್ದಿ, ಗದಗ

ಸ್ಥಳೀಯ ಜಗದ್ಗುರು ತೆ-ೋಂಟದಾರ್ಯ ವಿದ್ಯಾಪೀಠದ ಬಸವೇಶ್ವರ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯದಲ್ಲಿ ಫೆಬ್ರುವರಿ/ಮಾರ್ಚ್-2023ರಲ್ಲಿ ನಡೆದ ಬಿ.ಎ 5ನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ಶೇ.92.30%ರಷ್ಟು ಫಲಿತಾಂಶ ಪಡೆದುಕೊಂಡಿದೆ.

23 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 12 ವಿದ್ಯಾರ್ಥಿಗಳು ಪ್ರಥಮ ಹಾಗೂ ಓರ್ವ ವಿದ್ಯಾರ್ಥಿ ದ್ವಿತೀಯ ಸ್ಥಾನ ಪಡೆದಿದ್ದಾರೆ.



ಮೈಬೂಬ ಮುಂಡರಗಿ (86.5%) ಮತ್ತು ರಾಘವೇಂದ್ರ ತೆಗ್ಗಿನಮನಿ (83.5%) ಕಾಲೇಜಿಗೆ ಪ್ರಥಮಸ್ಥಾನ ಪಡೆದಿದ್ದಾರೆ. ದ್ರಾಕ್ಷಾಯಣಿ ರೂಪನವರ (82.72%) ಹಾಗೂ ಪವಿತ್ರಾ ಕುರಿ (82.5%) ದ್ವಿತೀಯ ಸ್ಥಾನ, ಸುಷ್ಮಾಸ್ವರಾಜ್ ನವಲಗುಂದ (81%) ಹಾಗೂ ಅನಿತಾ ಕೋಣಿಸಾಗರ (80%) ತೃತೀಯ ಸ್ಥಾನ ಪಡೆದು ಮಹಾವಿದ್ಯಾಲಯಕ್ಕೆ ಕೀರ್ತಿ ತಂದಿದ್ದಾರೆ. ಸಾಧಕ ವಿದ್ಯಾರ್ಥಿಗಳನ್ನು ವಿದ್ಯಾಪೀಠದ ಕಾರ್ಯದರ್ಶಿ ಎಸ್ ಎಸ್ ಪಟ್ಟಣಶೆಟ್ಟಿ, ಕಾಲೇಜಿನ ಆಡಳಿತ ಮಂಡಳಿಯ ಸರ್ವ ಸದಸ್ಯರು, ಪ್ರಾಚಾರ್ಯ ಎಂ ಎಂ ಬುರಡಿ ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

## ಸಿ ಎ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಸಾಧನೆ

■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಮನೋರಮಾ ಮಹಾವಿದ್ಯಾಲಯದಲ್ಲಿ ಪದವಿ ಪೂರೈಸಿದ ನಂತರ ಸಿ ಎ ಪರೀಕ್ಷೆಯಲ್ಲಿ ವಿದ್ಯಾರ್ಥಿನಿ ಆಫ್ರೀನ ಮುಲ್ಲಾ ಹಾಗೂ ವಿನಾಯಕ ಮೇರವಾಡೆ ಉತ್ತಮ ಅಂಕ ಗಳಿಸಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಸಂಸ್ಥೆಯ ಚೇರಮನ್ ಎನ್ ಎಮ್ ಕುಡತರಕರ, ಪ್ರಾಚಾರ್ಯ ಬಿ ಎಸ್ ಹಿರೇಮಠ, ಆಡಳಿತಾಧಿಕಾರಿ ಕಿಶೋರ ಮುದಗಲ್ಲ, ಸಹ ಸಂಯೋಜಕರುಗಳಾದ ಪ್ರೊ. ನಿವೇದಿತಾ ಪೊಲೀಸ್‌ಪಾಟೀಲ, ಪ್ರೊ. ಸವಿತಾ ಪೂಜಾರ, ಸಂಸ್ಥೆಯ ಸರ್ವ ಪದಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಸಾಧಕ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.





# ನೇಕಾರರ ಗಣತಿ ಕಾರ್ಯ

■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ವಿದ್ಯುತ್ ಮಗ್ಗ ನೇಕಾರರ ಹಾಗೂ ಮಗ್ಗ ಪೂರ್ವ ಚಟುವಟಿಕೆಗಳಲ್ಲಿ ತೊಡಗಿರುವ ಕೆಲಸಗಾರರ ಗಣತಿ ಕಾರ್ಯವನ್ನು ಮೇ: ಆಕಾಡೆಮಿ ಆಫ್ ಮ್ಯಾನೇಜಮೆಂಟ್ ಸ್ಟಡಿಸ್ ಸಂಸ್ಥೆಯ ಮೂಲಕ ಈಗಾಗಲೇ ಮಾಡಲಾಗಿದೆ. ಸದರಿ ಘಟಕಗಳ ಸಮೀಕ್ಷೆ ಹಾಗೂ ಗಣತಿಯು ಅಂತಿಮ ಹಂತದಲ್ಲಿದ್ದು ಗಣತಿಯನ್ನು ಮಾಡಿಸದೇ ಇರುವ/ಬಿಟ್ಟು ಹೋದ ವಿದ್ಯುತ್ ಮಗ್ಗ ನೇಕಾರರು ಹಾಗೂ ಮಗ್ಗ ಪೂರ್ವ ಚಟುವಟಿಕೆಯಲ್ಲಿ ತೊಡಗಿರುವ ನೇಕಾರರು ಗಣತಿಯಲ್ಲಿ ನೊಂದಣಿ ಮಾಡಿಸಲು ವಿದ್ಯುತ್ ಮಗ್ಗ ಘಟಕದ ಮಾಲೀಕರು ತಮ್ಮ ಘಟಕದ ಆರ್.ಆರ್ ಸಂಖ್ಯೆ, ಉದ್ಯೋಗ ಆಧಾರ, ಇತ್ತೀಚಿನ ವಿದ್ಯುತ್ ಬಿಲ್, ಮೊಬೈಲ್ ಸಂಖ್ಯೆ ವಿವರಗಳುಳ್ಳ ದಾಖಲಾತಿಯನ್ನು ಘಟಕದ ಮೊಹರು ಹಾಗೂ ದೃಢೀಕರಣದೊಂದಿಗೆ ಜುಲೈ 20 ರೊಳಗಾಗಿ ಕಛೇರಿಗೆ ಸಲ್ಲಿಸಬಹುದಾಗಿದೆ.

ಗಣತಿ ಕಾರ್ಯ ಅಂತ್ಯಗೊಂಡ ನಂತರ ಯಾವುದೇ ಕಾರಣಕ್ಕೂ ಸೇರ್ಪಡೆ ಮಾಡಲು ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ನಂ-206 2ನೇ ಮಹಡಿ ಜಿಲ್ಲಾ ಆಡಳಿತ ಭವನ ಗದಗ ಕಛೇರಿ ಮೊಬೈಲ್ ನಂ-9980208292 ಮತ್ತು 9916582238ಗೆ ಸಂಪರ್ಕಿಸಬಹುದಾಗಿದೆ.

## ಜುಲೈ 14 ರಂದು ಮಧ್ಯಾಹ್ನ 2.35ಕ್ಕೆ ಭಾರತದ ಚಂದ್ರಯಾನ-3 ಉಡಾವಣೆ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಚಂದಿರನ ಅಂಗಳಕ್ಕೆ ನೌಕೆಯನ್ನು ಕಳುಹಿಸುವ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ(ಇಸ್ರೋ) ಮೂರನೇ ಪ್ರಯತ್ನ ಅಂತಿಮ ಘಟ್ಟ ತಲುಪಿದ್ದು, ಜುಲೈ 14 ರಂದು ಮಧ್ಯಾಹ್ನ 2.35ಕ್ಕೆ ಶ್ರೀಹರಿಕೋಟಾದಿಂದ ಉಡಾವಣೆಯಾಗಲಿದೆ.

ಜುಲೈ 14ರಂದು ಮಧ್ಯಾಹ್ನ 2.35ಕ್ಕೆ ಚಂದ್ರಯಾನ-3 ಮಿಷನ್ ಶ್ರೀಹರಿಕೋಟದಿಂದ ಉಡಾವಣೆಯಾಗಲಿದೆ. ಹೆಚ್ಚಿನ ಅಪ್ಡೇಟ್ ನಿರೀಕ್ಷಿಸಿ ಎಂದು ಗುರುವಾರ ಇಸ್ರೋ ಟ್ವೀಟ್ ಮಾಡಿದೆ.

ಚಂದ್ರಯಾನ- 3 ಬಾಹ್ಯಾಕಾಶ ನೌಕೆಯನ್ನು ಒಳಗೊಂಡ ಪೇಲೋಡ್ ಅನ್ನು ಜಿಯೋ ಸಿಂಕ್ರೊನಸ್ ಲಾಂಚ್ ವೆಹಿಕಲ್ ಮಾರ್ಕ್ III (ಜಿಎಸ್‌ಎಲ್‌ವಿ ಎಂಕೆ-III) ಉಡಾವಣಾ ನೌಕೆಗೆ ಬುಧವಾರ ಸೇರ್ಪಡೆಗೊಳಿಸಲಾಗಿದೆ.

ಈ ಮುಂಚೆ ಬಹು ನಿರೀಕ್ಷಿತ ಚಂದ್ರಯಾನ-3 ಜುಲೈ 13 ರಂದು ಉಡಾವಣೆಗೊಳ್ಳಲಿದೆ ಎಂದು ಇಸ್ರೋ ಘೋಷಿಸಿತ್ತು. ಇದೀಗ ಉಡಾವಣೆ ಜುಲೈ 14 ರಂದು, ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಲ್ಲಿ ಉಡಾವಣೆ ನಡೆಯಲಿದೆ ಎಂದು ಇಸ್ರೋ ಹೇಳಿದೆ.

## ಯೋಜನೆಯ ಸದ್ಬಳಕೆಯಲ್ಲಿ ಎಲ್ಲರ ಸಹಭಾಗಿತ್ವ ಅಗತ್ಯ

▶▶ ಮೊದಲನೇ ಪುಟದಿಂದ

ಕಾಮಗಾರಿಗಳಲ್ಲಿ ಮಹಿಳಾ ಕಾರ್ಮಿಕರ ಸಂಖ್ಯೆಯನ್ನು ವೃದ್ಧಿಸಿ, ಅವರಲ್ಲಿ ಸ್ವಾವಲಂಬಿ ಮನೋಭಾವ ಬೆಳೆಸುವ ನಿಟ್ಟಿನಲ್ಲಿ ನರೇಗಾ ತಂಡದ ವತಿಯಿಂದ ವಿಶೇಷ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗಿದೆ ಎಂದರು.

ನರೇಗಾ ಯೋಜನೆಯ ತಾ ಪಂ ಐಇಸಿ ಸಂಯೋಜಕರಾದ ವೀರೇಶ ಬಸನಗೌಡ್ರ ಮಾತನಾಡಿ, ಜಿಲ್ಲೆಯಲ್ಲಿಯೇ ಮಾಢಳ್ಳಿ ಗ್ರಾಮ ಪಂಚಾಯತಿಯಲ್ಲಿ ಅತಿ ಕಡಿಮೆ ಮಹಿಳಾ ಕಾರ್ಮಿಕರ ಪಾಲ್ಗೊಳ್ಳುವಿಕೆಯಿದೆ. ಇದನ್ನು ಹೆಚ್ಚಿಸುವಲ್ಲಿ ಗ್ರಾಮದ ಅಧಿಕಾರಿ ವರ್ಗ ಹಾಗೂ ಗ್ರಾಮ ಪಂಚಾಯತಿ ಸದಸ್ಯರ ಪಾತ್ರ ಪ್ರಮುಖವಾಗಿದೆ ಎಂದು ತಿಳಿಸಿದರು. ತಾಂತ್ರಿಕ ಸಹಾಯರಾದ ಲಿಂಗರಾಜ ಅರಿಷಿಣದ ಪ್ರಾಸ್ತಾವಿಕವಾಗಿ ಮಾತನಾಡಿದರು. ಗ್ರಾ ಪಂ ಸದಸ್ಯರಾದ ಬಸವರಡ್ಡಿ ಮರಡೂರ, ಹನುಮರಡ್ಡಿ ಹೊಂಬಳ, ಗಂಗಾಧರ ಸಂದಿಮನಿ, ಕಾರ್ಯದರ್ಶಿ ನವ್ವಾ ಗಾವಡಿ, ಡಿಇಒ ಪ್ರಕಾಶ ಪಾಟೀಲ ಇತರರಿದ್ದರು.

## ಉಚಿತ ಆರೋಗ್ಯ ತಪಾಸಣಾ ಶಿಬಿರ ಇಂದು

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಿನ ಆದ್ರಳ್ಳಿ ಗವಿಮಠದ ಶ್ರೀ ಕುಮಾರ ಮಹಾರಾಜರ ಜನ್ಮದಿನ ಪ್ರಯುಕ್ತ ಶುಕ್ರವಾರ ಬೆಳಿಗ್ಗೆ 10ರಿಂದ ಮಧ್ಯಾಹ್ನ 3 ಗಂಟೆವರೆಗೆ ಶ್ರೀಮಠದ ಆವರಣದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ.

ಬೆಂಗಳೂರಿನ ಸಪ್ತಗಿರಿ ಆಸ್ಪತ್ರೆಯ ತಜ್ಞ ವೈದ್ಯರು ಪಾಲ್ಗೊಳ್ಳುವ ಈ ಶಿಬಿರದಲ್ಲಿ, ಹೃದಯ ರೋಗ, ನರರೋಗ, ಮೂತ್ರಪಿಂಡದ ಕಲ್ಲು ಹಾಗೂ ಕ್ಯಾನ್ಸರ್ ಉಚಿತ ತಪಾಸಣೆ ನಡೆಯಲಿದೆ. ಶಿಬಿರಕ್ಕೆ ಬರುವಾಗ ತಪ್ಪದೆ ರೇಷನ್ ಕಾರ್ಡ್ ಹಾಗೂ ಆಧಾರ್ ಕಾರ್ಡ್ ತರತಬೇಕು. ಉಚಿತವಾಗಿ ಚಿಕಿತ್ಸೆ ಹಾಗೂ ಶಸ್ತ್ರ ಚಿಕಿತ್ಸೆಯನ್ನು ನೀಡಲಾಗುವುದು.



ಶಸ್ತ್ರ ಚಿಕಿತ್ಸೆಗೆ ಆಯ್ಕೆಯಾದ ರೋಗಿಗಳಿಗೆ ಬೆಂಗಳೂರಿನ ಸಪ್ತಗಿರಿ ಆಸ್ಪತ್ರೆಗೆ ಹೋಗಲು ಉಚಿತ ಬಸ್ ವ್ಯವಸ್ಥೆ ಇರುವುದು. ಆದ್ರಳ್ಳಿ ಸೇರಿ ಸುತ್ತಮುತ್ತಲಿನ ಗ್ರಾಮದ ಜನರಿ ಈ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಶ್ರೀ ಕುಮಾರ ಮಹಾರಾಜರು ತಿಳಿಸಿದ್ದಾರೆ.

## ಧಾರವಾಡ ಕೃವಿವಿ-ಅಗಡಿ ಇಂಜಿನಿಯರಿಂಗ್ ಕಾಲೇಜು ಒಡಂಬಡಿಕೆ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಕೃಷಿ ಕ್ಷೇತ್ರದಲ್ಲಿ ತಾಂತ್ರಿಕ ಸಂಶೋಧನೆಗೆ ವಿಶೇಷ ಒತ್ತು ನೀಡುವ ನಿಟ್ಟಿನಲ್ಲಿ ಕೃಷಿ ವಿಶ್ವವಿದ್ಯಾಲಯ ಧಾರವಾಡ ಹಾಗೂ ಪಟ್ಟಣದ ಶ್ರೀ ಕಮಲಾ ಮತ್ತು ಶ್ರೀ ವೆಂಕಪ್ಪ ಎಂ ಅಗಡಿ ಇಂಜಿನಿಯರಿಂಗ್ ಕಾಲೇಜು ಪರಸ್ಪರ ಒಡಂಬಡಿಕೆ ಮಾಡಿಕೊಂಡಿದ್ದು, ಗುರುವಾರ ಕೃಷಿ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ. ಪಿ ಎಲ್ ಪಾಟೀಲ ಮತ್ತು ಇಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯ ಡಾ. ಉದಯಕುಮಾರ ಎಸ್ ಹಂಪಣ್ಣವರ ಒಡಂಬಡಿಕೆ ಪತ್ರಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡರು. ಈ ಒಡಂಬಡಿಕೆಯು ಮಾಹಿತಿ ತಂತ್ರಜ್ಞಾನ ಮತ್ತು ಕೌಶಲ್ಯ ವಿನಿಮಯ, ಜಂಟಿ ಯೋಜನೆಗಳ ಪ್ರಸ್ತಾವನೆ ಸಲ್ಲಿಕೆ ಹಾಗೂ ಪ್ರಯೋಗಾಲಯಗಳ ಉಪಯೋಗಗಳನ್ನು ಒಳಗೊಂಡಿದೆ.

ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಕುಲಸಚಿವ ಡಾ. ಎಸ್ ಎಸ್ ಅಂಗಡಿ, ಸಂಶೋಧನಾ ನಿರ್ದೇಶಕರಾದ ಡಾ. ಬಿ ಡಿ ಬಿರಾದಾರ, ಪ್ರಧಾನ ವಿಜ್ಞಾನಿಗಳಾದ ಡಾ. ಪಿ ಸುರೇಂದ್ರ, ಸಂಶೋಧನಾ ಸಹಾಯಕ ನಿರ್ದೇಶಕರಾದ ಡಾ. ಪಿ ಯು ಕೃಷ್ಣರಾಜ, ಅಗಡಿ ಇಂಜಿನಿಯರಿಂಗ್ ಕಾಲೇಜಿನ ಉಪ ಪ್ರಾಂಶುಪಾಲ ಡಾ. ಪರಶುರಾಮ ಬಾರ್ಕಿ, ಸಹ ಪ್ರಾಧ್ಯಾಪಕ ಡಾ. ನವೀನ ಮಾಳದ ಮತ್ತು ಡಾ. ರಾಜಶೇಖರ ಕುನಬೇವ ಉಪಸ್ಥಿತರಿದ್ದರು.

### ಶಿವಾನುಭವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಡಾ. ತೋಂಟದ ಸಿದ್ಧರಾಮ ಶ್ರೀಗಳು

# ಫ ಗು ಹಳಕಟ್ಟಿಯವರ ಕಾಯಕ ಶ್ರದ್ಧೆ ಅನುಕರಣೀಯ



■ ವಿಜಯಸಾಕ್ಷಿ ಸುದ್ದಿ, ಗದಗ

ವಚನ ಪಿತಾಮಹ ಡಾ. ಫ ಗು ಹಳಕಟ್ಟಿಯವರು ವಚನ ಸಾಹಿತ್ಯವನ್ನು ಸಂಗ್ರಹಿಸಿ, ಸಂರಕ್ಷಿಸಿ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ಪ್ರತಿಷ್ಠಿತ ಶೈಕ್ಷಣಿಕ ಹಾಗೂ ಆರ್ಥಿಕ ಸಂಸ್ಥೆಗಳನ್ನು ಹುಟ್ಟುಹಾಕಿ ಸಮಾಜವನ್ನು ಬೆಳೆಸಿದ ಶ್ರೇಯಸ್ಸು ಹಳಕಟ್ಟಿಯವರದು ಎಂದು ತೆ-ೋಂಟದಾರ್ಯ ಸಂಸ್ಥಾನಮಠದ ಪೂಜ್ಯ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಹೇಳಿದರು.

ಲಿಂಗಾಯತ ಪ್ರಗತಿಶೀಲ ಸಂಘದ 2648ನೇ ಶಿವಾನುಭವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಫ ಗು ಹಳಕಟ್ಟಿಯವರು ಶ್ರೇಷ್ಠ ವಿದ್ವಾಂಸರು. ಅವರು ಸಾಹಿತ್ಯ, ಸಂಸ್ಕೃತಿ, ಸಮಾಜ, ಶಿಕ್ಷಣ, ಸಹಕಾರ, ವಾಣಿಜ್ಯ ಮುಂತಾದ ಅನೇಕ ಕ್ಷೇತ್ರಗಳಲ್ಲಿ ಅನುಪಮ ಸೇವೆ ಸಲ್ಲಿಸಿದ್ದಾರೆ. ಅಪಾರ ಅನುಭವ, ಕಾಯಕಶ್ರದ್ಧೆ ಅವರದಾಗಿತ್ತು. ಅವರು ಸ್ಥಾಪಿಸಿದ ಬಿಎಲ್‌ಡಿಇ ಸಂಸ್ಥೆ ಇಂದು ನಾಡಿನೆಲ್ಲೆಡೆ ಪ್ರಸಿದ್ಧವಾಗಿದೆ ಎಂದರು.

ಪಿಪಿಜಿ ಪದವಿ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ. ರಾಜಶೇಖರ ದಾನರಡ್ಡಿ ಉಪನ್ಯಾಸ ನೀಡಿ, ಹಳಕಟ್ಟಿಯವರು ವಚನ ಸಾಹಿತ್ಯವನ್ನು ಪುನರುಜ್ಜೀವನಗೊಳಿಸಿದ ಪ್ರಮುಖರಲ್ಲಿ ಒಬ್ಬರು. ಮನೆಗಳಲ್ಲಿ, ಮಠಗಳಲ್ಲಿದ್ದ ಹಳೆಯ ವಚನದ ಕಟ್ಟುಗಳನ್ನು ಪಡೆದು ಸಂಶೋಧನೆ ಮಾಡಿದ್ದಾರೆ. ಹಳೆಯ ಕಟ್ಟುಗಳನ್ನು ಸಂಗ್ರಹಿಸಿ ಹೊಸ ರೂಪವನ್ನು ಕೊಟ್ಟವರು ಹಳಕಟ್ಟಿಯವರು ಎಂದು ತಿಳಿಸಿದರು.

ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪ್ರಕಾಶ ಅಸುಂಡಿ ಮಾತನಾಡಿ, ಲಿಂಗಾನಂದ ಮಹಾಸ್ವಾಮಿಗಳು ವಚನ ಸಾಹಿತ್ಯದ ಸಾರವನ್ನು ನಾಡಿನಾದ್ಯಂತ ಸಂಚರಿಸಿ ಪಸರಿಸಿದ್ದಾರೆ. ಶಿವಶರಣರ ತತ್ತ್ವಗಳನ್ನು ಅತ್ಯಂತ ಶ್ರದ್ಧೆಯಿಂದ ಪಾಲಿಸಿಕೊಂಡು ಬಂದಿದ್ದಾರೆ. ಈ ಕಾರ್ಯದಲ್ಲಿ ಲಿಂಗಾನಂದ ಮಹಾಸ್ವಾಮಿಗಳವರ ಸೇವೆ, ಶ್ರಮ ಅಗಾಧವಾದುದು ಎಂದು ತಿಳಿಸಿದರು.

> ಹಳಕಟ್ಟಿಯವರು ವಯಕ್ತಿಕವಾಗಿ ಸಾಕಷ್ಟು ಕಷ್ಟಗಳಿದ್ದರೂ ಲೆಕ್ಕಿಸದೇ, ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದ್ದರು. ಹಳಕಟ್ಟಿಯವರು ನೀಡಿದ ವಚನ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿ, ಅವುಗಳನ್ನು ತಮ್ಮ ಪ್ರವಚನದ ಮೂಲಕ ನಾಡಿಗೆ ಪರಿಚಯಿಸಿದ ಕೀರ್ತಿ ಲಿಂಗಾನಂದ ಮಹಾಸ್ವಾಮಿಗಳವರದು. ಅವರು ಪ್ರವಚನ ಪಿತಾಮಹರೆಂದೇ ನಾಡಿಗೆ ಚಿರಪರಿಚಿತರು.
>
> **– ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು.**
> ತೋಂಟದಾರ್ಯ ಸಂಸ್ಥಾನಮಠ.

ಶ್ರೀಮಠದ ಕಲಾವಿದರಾದ ಮೃತ್ಯುಂಜಯ ಹಿರೇಮಠ ಮತ್ತು ಗುರುನಾಥ ಸುತಾರ ಇವರ ವಚನ ಸಂಗೀತದೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು. ಆದಿತ್ಯ ನಾಗರಾಜ ಮುನವಳ್ಳಿ ಧರ್ಮಗ್ರಂಥ ಪಠಣಗೈದರು. ಸೌಜನ್ಯ ಮಂಜುನಾಥ ಚವಡಿ ಇವರಿಂದ ವಚನ ಚಿಂತನ ನಡೆಯಿತು. ಶಿವಾನುಭವ ಭಕ್ತಿಸೇವೆಯನ್ನು ವಹಿಸಿದ್ದ ಅಂದಾನಪ್ಪ ಶಾಂತಪ್ಪ ಚವಡಿ ಮತ್ತು ಕುಟುಂಬವರ್ಗವನ್ನು ಶ್ರೀಗಳು ಸನ್ಮಾನಿಸಿದರು.

ಲಿಂಗಾಯತ ಪ್ರಗತಿಶೀಲ ಸಂಘದ ಅಧ್ಯಕ್ಷ ಶೇಖಣ್ಣ ಕಳಸಾಪೂರ ಸ್ವಾಗತಿಸಿದರು. ರತ್ನಕ್ಕ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಉಪಾಧ್ಯಕ್ಷ ಬಾಲಚಂದ್ರ ಭರಮಗೌಡರ, ರೇಣುಕಾ ವಿ ಕರೇಗೌಡ್ರ, ಕಾರ್ಯದರ್ಶಿ ಮಹೇಶ ಗಾಣಿಗೇರ, ಸಹಕಾರ್ಯದರ್ಶಿ ವಿಜಯಕುಮಾರ ಹಿರೇಮಠ, ವಿರುಪಾಕ್ಷಪ್ಪ ಅರಳಿ, ಸಂಘಟನಾ ಕಾರ್ಯದರ್ಶಿ ಅಶೋಕ ಹಾದಿ, ಕೋಶಾಧ್ಯಕ್ಷ ಸುರೇಶ ನಿಲೂಗಲ್, ಶಿವಾನುಭವ ಸಮಿತಿ ಚೇರಮನ್ ವಿವೇಕಾನಂದಗೌಡ ಪಾಟೀಲ ಉಪಸ್ಥಿತರಿದ್ದರು.

# ಬಸವರಾಜ ಹೊರಟ್ಟಿ-ಸಿಎಂ ಸಿದ್ದರಾಮಯ್ಯ ಉಭಯ ಕುಶಲೋಪರಿ



■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪ್ರಪ್ರಥಮ ಬಾರಿಗೆ ವಿಧಾನ ಪರಿಷತ್ತಿಗೆ ಆಗಮಿಸುವ ಪೂರ್ವದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಅವರ ಕಚೇರಿಗೆ ಆಗಮಿಸಿ, ಉಭಯ ಕುಶಲೊಪರಿ ಹಂಚಿಕೊಂಡರು.

ಈ ಸಂದರ್ಭದಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಪ್ರವಾಸೋದ್ಯಮ ಸಚಿವ ಎಚ್ ಕೆ ಪಾಟೀಲ, ಸಣ್ಣ ನೀರಾವರಿ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವ ಎನ್ ಎಸ್ ಬೋಸರಾಜ್, ವಿಧಾನಪರಿಷತ್ ಸದಸ್ಯರಾದ ಸಲೀಂ ಅಹಮದ್, ನಾರಾಯಣಸ್ವಾಮಿ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದರಾಜ್, ಸಚಿವಾಲಯದ ಉನ್ನತ ಅಧಿಕಾರಿಗಳಾದ ಮಹಾಲಕ್ಷ್ಮೀ, ಸಭಾಪತಿಯವರ ವಿಶೇಷ ಕಾರ್ಯದರ್ಶಿ ಶೈಲಾ ಕೆ ಡಿ, ಕರ್ತವ್ಯಾಧಿಕಾರಿ ಡಾ. ಮಹೇಶ್ ವಾಳ್ವೇಕರ್ ಮುಂತಾದವರು ಉಪಸ್ಥಿತರಿದ್ದರು ಎಂದು ಡಾ. ಬಸವರಾಜ ಧಾರವಾಡ ತಿಳಿಸಿದ್ದಾರೆ.

# ಪರಿಸರ ಸಂರಕ್ಷಣೆ ಎಲ್ಲರ ಕರ್ತವ್ಯವಾಗಲಿ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪರಿಸರ ಸಂರಕ್ಷಣೆ ಇಂದು ತೀರಾ ಅಗತ್ಯವಾಗಿದ್ದು, ಅದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೇಲ್ವಿಚಾರಕಿ ರೇಣುಕಾ ಹೇಳಿದರು.

ಅವರು ಪಟ್ಟಣದ ಆರ್ ಎನ್ ದೇಶಪಾಂಡೆ ಸರಕಾರಿ ಪ್ರಥಮದರ್ಜೆ ಕಾಲೇಜು ಆವರಣದಲ್ಲಿ ಪರಿಸರ ದಿನಾಚರಣೆ ಅಂಗವಾಗಿ ಸಂಸ್ಥೆಯ ವತಿಯಿಂದ ಸಸಿಗಳನ್ನು ನೆಟ್ಟು ಮಾತನಾಡಿ, ಪರಿಸರ ಉಳಿಸಿ ಬೆಳೆಸುವ ಮತ್ತು ಸಂರಕ್ಷಿಸುವ ಸಂಕಲ್ಪ ವಿದ್ಯಾರ್ಥಿ ದೆಸೆಯಿಂದಲೇ ಬರಬೇಕು. ಪರಿಸರ ಅವಸಾನದ ಅಂಚಿನಲ್ಲಿದ್ದರೂ ನಾವೆಲ್ಲರೂ ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ಪೀಳಿಗೆ ಸಂಕಷ್ಟ ಅನುಭವಿಸಬೇಕಾಗುತ್ತದೆ. ಪ್ರತಿಯೊಬ್ಬರೂ ಮನೆಯ ಸುತ್ತ-ಮುತ್ತ ಗಿಡ-ಮರಗಳನ್ನು ನೆಡುವ ಮೂಲಕ ಪರಿಸರ ಸಂರಕ್ಷಿಸಿ ಎಂದರು.

ಶಿರಹಟ್ಟಿ ತಾಲೂಕಾ ಯೋಜನಾಧಿಕಾರಿ ವಿನೋದ, ಕೃಷಿ ಮೇಲ್ವಿಚಾರಕ ಪ್ರಕಾಶ, ಯೋಗ ಗುರು ಪ್ರಕಾಶ ಮದ್ದಿನ, ಪ್ರಾಚಾರ್ಯರಾದ ಅನುಪಮಾ, ಪ್ರಸನ್ನ ಎಸ್, ಗಿರೀಶ ಎಂ, ಕೆ ವಿ ನೇತ್ರಾವತಿ, ಭಾರತಿ ಆರ್ ಎನ್, ಗೀತಾಜಂಲಿ ಆರ್, ಜಾನಕಿ ಮರಾಠೆ, ಪದ್ಮಾವತಿ ವ್ಹಿ, ಕೆ ಎಂ ಶಿರೂರ, ಎನ್ ಕೆ ಕಡೆಮನಿ, ಡಾ. ಪಿ ಎಚ್ ಬಾರಕೇರ, ಐ ಬಿ ಖಾಗದ, ಎಸ್ ಸಿ ಸಿಂಧೂರ, ವಿಠಲಕುಮಾರ ಪವಾರ ಮುಂತಾದವರಿದ್ದರು.

# ಆಜಾದ್ ಕಟ್ಟಡ ಕಾರ್ಮಿಕ ಸಂಘದಿಂದ ಉಚಿತ ಆರೋಗ್ಯ ತಪಾಸಣೆ

■ವಿಜಯಸಾಕ್ಷಿ ಸುದ್ದಿ, ಮುಳಗುಂದ



ಪಟ್ಟಣದ ಬೋಗೇರಿ ಓಣಿಯ ಹನುಮಾನ ದೇವಾಲಯದಲ್ಲಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಸಂಚಾರಿ ಚಿಕಿತ್ಸಾ ಘಟಕ ಹಾಗೂ ಆಜಾದ ಕಟ್ಟಡ ಕಾರ್ಮಿಕ ಸಂಘದ ಸಂಯುಕ್ತ ಆಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣೆ ಜರುಗಿತು.

ಡಾ. ಪಿ ಎಚ್ ಕಬಾಡೆ ಆರೋಗ್ಯ ತಪಾಸಣೆ ನಡೆಸಿ ಮಾತನಾಡಿ, ಇಂದಿನ ಆಧುನಿಕ ಯುಗದಲ್ಲಿ ನಾವೆಲ್ಲರೂ ಉತ್ತಮ ಆರೋಗ್ಯ ಹೊಂದುವುದು ಮುಖ್ಯವಾಗಿದೆ. ಪ್ರತಿ ಗುರುವಾರ ಆಜಾದ ಕಟ್ಟಡ ಕಾರ್ಮಿಕ ಸಂಘಟನೆಯಿಂದ ಉಚಿತ ಆರೋಗ್ಯ ತಪಾಸಣೆ ಜರುಗುತ್ತಿದ್ದು, ಇದರ ಸದುಪಯೋಗವನ್ನು ಕಟ್ಟಡ ಕಾರ್ಮಿಕರು ಪಡೆದುಕೊಳ್ಳಬೇಕು ಎಂದರು. ಆರೋಗ್ಯ ಸಿಬ್ಬಂದಿಗಳಾದ ತ್ರಿವೇಣಿ ಪಾಟೀಲ್, ಸವಿತಾ ಚಿಮ್ಮನಕಟ್ಟಿ, ಜ್ಯೋತಿ ಮೆಣಸಗಿ, ಶಿಲ್ಪಾ ಗಂಗದ, ದೇವರಾಜ ಉಪಾಧ್ಯಾಯ, ಆಜಾದ್ ಕಟ್ಟಡ ಕಾರ್ಮಿಕ ಸಂಘದ ಅಧ್ಯಕ್ಷ ಹನಮಂತಪ್ಪ ಕಟ್ಟಿಮನಿ, ಅಲ್ಲಾಭಕ್ಷಿ ಡಾಲಾಯತ, ಎಲ್ಲಪ್ಪಾ ಕಮಾಜಿ, ಮಂಜುನಾಥ ಆರೇರ, ಶಿವಪ್ಪಾ ಮಡ್ಡಿ, ಮಹೇಶ ಗಂಜಿ, ಮೋದಿನಸಾಬ ಸೇಖ, ಮಾಬುಸಾಬ ಡಾಲಾಯತ, ಮೈಲಾರಪ್ಪ ದೇವರಮನಿ, ಮೀರಸಾಬ ನರಗುಂದ, ನಿಂಗಪ್ಪ ನಾಯ್ಕರ್, ಖಾದರಸಾಬ ಮುಳಗುಂದ, ರಾಜೇಸಾಬ ಕಿಲ್ಲೇದಾರ ಮುಂತಾದವರಿದ್ದರು.

# ಕೈಹಿಡಿದ ಆರಿದ್ರೆ: ಗೋವಿನಜೋಳ ಬಿತ್ತನೆಗೆ ಮುಂದಾದ ರೈತರು



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಕಳೆದ ಮೂರ್ನಾಲ್ಕು ದಿನಗಳಿಂದ ಮೋಡಕವಿದ ವಾತಾವರಣದ ನಡುವೆ ಸತತ ಮಳೆ ಸುರಿಯುತ್ತಿದೆ. ಮುಂಗಾರಿನ ಪ್ರಮುಖ ರೋಹಿಣಿ, ಮೃಗಶಿರ ಮಳೆಗಳು ಸಂಪೂರ್ಣ ಕೈಕೊಟ್ಟು ಚಿಂತಾಜನಕ ಸ್ಥಿತಿಯಲ್ಲಿರುವ ರೈತ ಸಮುದಾಯಕ್ಕೆ ಆರಿದ್ರ ಮಳೆಯ ಕೊನೆಯ ಚರಣ ಆಸರೆಯಾಗಿದೆ. ಆದರೆ ಇದೇ ಮಳೆ 15 ದಿನಗಳ ಹಿಂದೆ ಸುರಿದಿದ್ದರೆ ಹೆಸರು, ಶೇಂಗಾ, ಹತ್ತಿ ಇತರೆ ಬೆಳೆಗಳಿಗೆ ಅನಕೂಲವಾಗುತ್ತಿತ್ತು. ಈಗ ಬಿತ್ತನೆ ಕಾಲಾವಧಿ ಮುಗಿದಿದ್ದರಿಂದ ಯಾವ ಬೆಳೆ ಬಿತ್ತಬೇಕು ಎಂಬ ಚಿಂತೆ ರೈತರನ್ನು ಕಾಡುತ್ತಿದೆ.

ಹೆಸರು, ಹತ್ತಿ, ಶೇಂಗಾ ಬಿತ್ತನೆಯಾಗದೇ ರೈತರು ಚಿಂತೆಗೀಡಾಗಿದ್ದರು.

ಇದೀಗ ಬಹುತೇಕ ರೈತರು ಗೋವಿನಜೋಳ ಬಿತ್ತನೆಯಲ್ಲಿ ತೊಡಗಿದ್ದಾರೆ.

ಜಿಟಿ ಜಿಟಿ ಮಳೆಯಿಂದ ಕೃಷಿ ಕೆಲಸಕ್ಕೆ, ವ್ಯಾಪಾರ ವಹಿವಾಟಿಗೆ ಕೊಂಚ ಅಡ್ಡಿಯಾದರೂ ಮಳೆ ಬಂದಿರುವುದು ಎಲ್ಲರಲ್ಲಿ ಖುಷಿ ಮೂಡಿಸಿದೆ.

ಪಟ್ಟಣ ಸೇರಿ ತಾಲೂಕಿನ ಯಳವತ್ತಿ, ಯತ್ನಳ್ಳಿ, ಮಾಗಡಿ, ಗೊಜನೂರ, ಅಕ್ಕಿಗುಂದ, ಆದ್ರಳ್ಳಿ, ಬಡ್ನಿ, ಬಟ್ಟೂರ, ಸೂರಣಗಿ, ಹುಲ್ಲೂರ, ಬಾಲೆಹೊಸೂರ, ಶಿಗ್ಲಿ, ದೊಡ್ಡೂರ, ರಾಮಗೇರಿ, ಬಸಾಪುರ, ಅಡರಕಟ್ಟಿ ಸೇರಿ ಎಲ್ಲೆಡೆ ಉತ್ತಮ ಮಳೆಯಾಗಿದೆ.

**ಪ್ರವಾಸೋದ್ಯಮ ಸಮಗ್ರ ಅಭಿವೃದ್ಧಿ ಸಮನ್ವಯ ಸಮಿತಿ ಅಧ್ಯಕ್ಷ ಮನೋಜಕುಮಾರ ಹೇಳಿಕೆ**

# ಪ್ರವಾಸಿ ತಾಣಗಳ ಅಭಿವೃದ್ಧಿಗೆ ಶೀಘ್ರವೇ ಕ್ರಿಯಾಯೋಜನೆ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ಲಕ್ಷ್ಮೇಶ್ವರ ಮತ್ತು ಶಿರಹಟ್ಟಿ ತಾಲೂಕಿನ ಐತಿಹಾಸಿಕ, ಧಾರ್ಮಿಕ ಮತ್ತು ನೈಸರ್ಗಿಕ ವಿಶೇಷತೆ ಹೊಂದಿರುವ ಪ್ರವಾಸಿ ಸ್ಥಳಗಳನ್ನು ಅಭಿವೃದ್ಧಿಪಡಿಸಲು ಶೀಘ್ರವೇ ಕ್ರಿಯಾಯೋಜನೆ ರೂಪಿಸಲಾಗುವುದು ಎಂದು ಅರಣ್ಯ, ವಸತಿ ಹಾಗೂ ವಿಹಾರಧಾಮ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಪ್ರವಾಸೋದ್ಯಮ ಸಮಗ್ರ ಅಭಿವೃದ್ಧಿ ಸಮನ್ವಯ ಸಮಿತಿ ಅಧ್ಯಕ್ಷ ಮನೋಜಕುಮಾರ ಹೇಳಿದರು.

ಅವರು ಗುರುವಾರ ಲಕ್ಷ್ಮೇಶ್ವರದ ಶ್ರೀಸೋಮೇಶ್ವರ ದೇವಸ್ಥಾನ, ಮುಕ್ತಿಮಂದಿರ ಧರ್ಮಕ್ಷೇತ್ರ ಮತ್ತು ಶೆಟ್ಟಿಕೇರಿ ನೈಸರ್ಗಿಕ ಪ್ರದೇಶಗಳ ವೀಕ್ಷಣೆ ನಡೆಸಿ ಮಾತನಾಡಿ, ಜಿಲ್ಲೆಯಲ್ಲಿನ ಪ್ರವಾಸಿ ತಾಣಗಳ ಬಗ್ಗೆ ಸಂಪರ್ಕ ಮಾಧ್ಯಮಗಳ ಮೂಲಕ ಪ್ರಚಾರ ಮಾಡುವುದು, ಕ್ಷೇತ್ರ ವ್ಯಾಪ್ತಿಯ ತಾಣಗಳ ಸಂಪರ್ಕ ಕೊಂಡಿ ರೂಪಿಸುವುದು, ಪ್ರವಾಸಿ ತಾಣಗಳಲ್ಲಿ ಮೂಲಭೂತ ಸೌಲಭ್ಯ ಕಲ್ಪಿಸುವುದು ಸೇರಿದಂತೆ ಅನೇಕ ಪೂರಕ ಯೋಜನೆಗಳನ್ನು ರೂಪಿಸಲಾಗುವುದು ಎಂದರು.

> ಗದಗ ಜಿಲ್ಲೆಯ ಲಕ್ಷ್ಮೇಶ್ವರ ತಾಲೂಕಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕವಾದ ವಾತಾವರಣವಿದೆ. ಮುಖ್ಯವಾಗಿ ಐತಿಹಾಸಿಕ ಹಿನ್ನೆಲೆ ಮತ್ತು ವಿಶೇಷ ವಾಸ್ತುಶಿಲ್ಪದಿಂದ ಕೂಡಿದ ಶ್ರೀ ಸೋಮೇಶ್ವರ ದೇವಸ್ಥಾನ ಅತ್ಯಂತ ಪ್ರೇಕ್ಷಣೀಯ ಕ್ಷೇತ್ರವಾಗಿದೆ. ಕೈಗಾ-ಇಳಕಲ್ ರಾಜ್ಯ ಹೆದ್ದಾರಿಗೆ ಹೊಂದಿರುವ ದೇವಸ್ಥಾನವನ್ನು ಇನ್ಫೋಸಿಸ್ ಪ್ರತಿಷ್ಠಾನದಿಂದ ಡಾ. ಸುಧಾಮೂರ್ತಿ ಅವರು ಜೀರ್ಣೋದ್ಧಾರ ಕಾರ್ಯ ಕೈಗೊಂಡಿದ್ದಾರೆ. ಇನ್ನುಳಿದಂತೆ ಮುಖ್ಯ ದೇವಸ್ಥಾನ, ಉತ್ತರ ದ್ವಾರ, ಕಲ್ಯಾಣಿ, ಕಂಪೌಂಡ್ ಅಭಿವೃದ್ಧಿಗೊಳ್ಳಬೇಕಿದೆ ಮತ್ತು ಪ್ರವಾಸಿಗರಿಗೆ ಪೂರಕ ಸೌಲಭ್ಯಗಳ ಅಗತ್ಯತೆಯಿದೆ. ಈ ಬಗ್ಗೆ ಸಮಗ್ರ ವರದಿ ನೀಡಲಾಗುವುದು.
>
> **– ಮನೋಜಕುಮಾರ.**
> ಅಧ್ಯಕ್ಷರು, ಪ್ರವಾಸೋದ್ಯಮ ಸಮಗ್ರ ಅಭಿವೃದ್ಧಿ ಸಮನ್ವಯ ಸಮಿತಿ.

ಈ ವೇಳೆ ಹಾಜರಿದ್ದ ದೇವಸ್ಥಾನ ಕಮಿಟಿ ಅಧ್ಯಕ್ಷ ಚಂಬಣ್ಣ ಬಾಳಿಕಾಯಿ, ಸುರೇಶ ರಾಚನಾಯ್ಕರ, ವಿರುಪಾಕ್ಷ ಆದಿ, ಅರ್ಚಕ ರಾಘು ಪೂಜಾರ, ನಂದೀಶ ಬಂಡಿವಾಡ, ಮಂಜುನಾಥ ಜಲ್ಲಿ ಅವರು ದೇವಸ್ಥಾನದ ಅಗತ್ಯತೆಗಳ ಬಗ್ಗೆ ಮಾಹಿತಿ ನೀಡಿ, ಅಭಿವೃದ್ಧಿಗೆ ಮನವಿ ಮಾಡಿದರು.

ಮುಕ್ತಿಮಂದಿರ ಧರ್ಮಕ್ಷೇತ್ರಕ್ಕೆ ಭೇಟಿ ನೀಡಿ, ಅಲ್ಲಿ ಪ್ರತಿಷ್ಠಾಪನೆಗೊಳ್ಳಲಿರುವ ತ್ರಿಕೋಟಿ ಶಿವಲಿಂಗ ದರ್ಶನ ವೀಕ್ಷಣೆ ಮಾಡಿ, ಶ್ರೀ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯರಿಂದ ಕ್ಷೇತ್ರದ ಮಹಿಮೆಯ ಬಗ್ಗೆ ಮಾಹಿತಿ ಪಡೆದರು. ಈ ವೇಳೆ ಧರ್ಮಕ್ಷೇತ್ರಕ್ಕೆ ಬರುವ ಭಕ್ತರ ಅನುಕೂಲತೆಗೆ ಅಗತ್ಯವಿರುವ ಸೌಲಭ್ಯಗಳ ಪಟ್ಟಿ ಮಾಡಿಕೊಂಡರು.

ಬಳಿಕ ನೈಸರ್ಗಿಕ ತಾಣ ಶೆಟ್ಟಿಕೆರೆ ವೀಕ್ಷಣೆ ಮಾಡಿದ ಅವರು, ಈ ಪ್ರದೇಶ ನಿಸರ್ಗದ ಅನೇಕ ಕೌತುಕಳನ್ನು ಒಳಗೊಂಡಿದೆ. ವಿಶಾಲವಾದ 224 ಎಕರೆ ಕೆರೆ, ಕೆರೆಗೆ ವಲಸೆ ಬರುವ ವಿದೇಶಿ ಪಕ್ಷಿಗಳು, ಮೀನುಗಾರಿಕೆ, ನೀರುನಾಯಿ, ಆಮೆ ಸೇರಿ ಅನೇಕ ಜಲಚರ ಪ್ರಾಣಿಗಳು, ಪಕ್ಷಿಗಳು, ಸರಿಸೃಪಗಳು ಇರುವ ತಾಣವಾಗಿದೆ. ಸುತ್ತಲೂ ಗುಡ್ಡ, ಅರಣ್ಯ ಪ್ರದೇಶವಾಗಿದ್ದು ಸಣ್ಣ ನೀರಾವರಿ, ಅರಣ್ಯ ಇಲಾಖೆಯ ಸಹಕಾರದಿಂದ ಪಕ್ಷಿ ವೀಕ್ಷಣೆಗೆ ಬರುವ ಪ್ರವಾಸಿಗರಿಗೆ ಪಕ್ಷಿ ವೀಕ್ಷಣಾ ಗೋಪುರ, ಬೈನಾಕ್ಯುಲರ್, ಪಾರ್ಕಿಂಗ್, ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಈ ಕ್ಷೇತ್ರವನ್ನು ಇನ್ನಷ್ಟು ಆಕರ್ಷಣೀಯ ಮತ್ತು ಪಿಕ್‌ನಿಕ್ ಸ್ಪಾಟ್ ಮಾಡಬಹುದು. ಪೂರಕ ವಾತಾವರಣ ಮತ್ತು ಸೌಲಭ್ಯ ಕಲ್ಪಿಸುವ ಬಗ್ಗೆ ಡ್ರೋನ್ ಕ್ಯಾಮರಾ ಮೂಲಕ ಕ್ಷೇತ್ರ ಸರ್ವೆ ಮಾಡಿ ಕ್ರಿಯಾಯೋಜನೆ ರೂಪಿಸಲಾಗುವುದು. ಜಿಲ್ಲೆಯಲ್ಲಿನ ಎಲ್ಲ ಪ್ರವಾಸಿ ಸ್ಥಳಗಳ ಬಗ್ಗೆ ಸಚಿವರಾದ ಹೆಚ್ ಕೆ ಪಾಟೀಲರು ಅತ್ಯಂತ ಉತ್ಸುಕರಾಗಿದ್ದಾರೆ ಎಂದರು.

ಜಿ ಪಂ ಮಾಜಿ ಸದಸ್ಯ ದೀಪಕ ಲಮಾಣಿ, ಅರಣ್ಯ ಇಲಾಖೆ ಸಿಬ್ಬಂದಿ ಪ್ರಕಾಶ ಗಾಣಿಗೇರ ಈ ಪ್ರದೇಶದ ವಿಶೇಷತೆ ಇಲ್ಲಿರುವ ಪ್ರಾಣಿ, ಪಕ್ಷಿಗಳ ಬಗ್ಗೆ ಮಾಹಿತಿ ನೀಡಿದರು. ಬಳಿಕ ಅವರು ಕ್ಷೇತ್ರ ಶ್ರೀಮಂತಗಡ(ಹೊಳಲಮ್ಮನಗುಡ್ಡ), ಭಾವೈಕ್ಯತೆಯ ಕ್ಷೇತ್ರ ಶಿರಹಟ್ಟಿಯ ಜ.ಫಕೀರೇಶ್ವರ ಸಂಸ್ಥಾನಮಠಕ್ಕೆ ಭೇಟಿ ನೀಡಿದರು. ಈ ವೇಳೆ ರಂಗನಗೌಡ ಓದುಗೌಡ್ರ, ಜಿ ಪಂ ಮಾಜಿ ಅಧ್ಯಕ್ಷ ಸಿದ್ದಲಿಂಗೇಶ ಪಾಟೀಲ ಹಾಗೂ ಅಧಿಕಾರಿಗಳು ಇದ್ದರು.

# ಮೆಣಸಿನಕಾಯಿ, ಈರುಳ್ಳಿ ಬೆಳೆಗಳ ಬೀಜೋಪಚಾರದ ಪ್ರಾತ್ಯಕ್ಷಿಕೆ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ರೈತರು ಬೀಜದ ಕಂಪನಿ ಅಥವಾ ತಾವೇ ಉತ್ಪಾದನೆ ಮಾಡಿದ ಬೀಜವನ್ನು ಬಿತ್ತನೆ ಪೂರ್ವ ಬಿಜೋಪಚಾರ ಮಾಡಿ ಬಿತ್ತನೆ ಮಾಡಬೇಕು. ಮುಂಜಾಗೃತಾ ಕ್ರಮದಿಂದ ರೋಗಬಾಧೆ ತಡೆಗಟ್ಟುವದರೊಂದಿಗೆ, ಉತ್ತಮ ಇಳುವರಿ ಪಡೆಯಬಹುದಾಗಿದೆ ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಸುರೇಶ ಕುಂಬಾರ ತಿಳಿಸಿದರು.

ಅವರು ತಾಲೂಕಿನ ಯಳವತ್ತಿ ಗ್ರಾಮದಲ್ಲಿ ಮೆಣಸಿನಕಾಯಿ ಮತ್ತು ಈರುಳ್ಳಿ ಬೆಳೆಯ ಬೀಜೋಪಚಾರ ಮಾಡುವ ಪ್ರಾತ್ಯಕ್ಷಿಕೆ ನೀಡಿ, ಬೆಳೆಗಳಿಗೆ ಬರುವ ಕೀಟ, ರೋಗಗಳು ಹಾಗೂ ಹತೋಟಿ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

ಈ ಬೆಳೆಗಳ ಬೀಜಗಳನ್ನು ರಾಸಾಯನಿಕ ಪದ್ಧತಿಯಲ್ಲಿ ಹಾಗೂ ಸಾವಯವ ಪದ್ಧತಿಯಲ್ಲಿ ಬೀಜೋಪಚಾರ ಮಾಡಬಹುದು. ರಾಸಾಯನಿಕ ಪದ್ಧತಿಯಲ್ಲಿ, 2 ಗ್ರಾಂ ಪಾದರಸ ಸಂಯುಕ್ತ ವಸ್ತು ಅಥವಾ 2 ಮಿಮೀ ಇಮಿಡಾಕ್ಲೋಪ್ರಿಡ್ ಮತ್ತು ಮ್ಯಾಂಕೊಜೆಬ್ 2ಗ್ರಾಂ. ಪ್ರತಿ 1 ಕಿಲೋ ಬೀಜಕ್ಕೆ ಉಪಚರಿಸಿ ನೆರಳಿನಲ್ಲಿ ಒಣಗಿಸಿ ನಂತರ ಬಿತ್ತನೆ ಮಾಡುವುದು. ಸಾವಯವ ಪದ್ಧತಿಯಲ್ಲಿಯಾದರೆ, ರೈರೋಬಿಯಂ ಅಣು ಜೀವಿ 100 ಗ್ರಾಂ ಪ್ರತಿ ಕೆ.ಜಿ ಬೀಜಕ್ಕೆ ಲೇಪನ ಮಾಡಿ ನೆರಳಿನಲ್ಲಿ ಒಣಗಿಸಿ, ಬಿತ್ತನೆ ಮಾಡುವುದು. ಅಣು ಜೀವಿಗಳಾದ ಅಝುಟೋಬ್ಯಾಕ್ಟರ, ಟ್ರೈಕೋಡರ್ಮಾ 100 ಗ್ರಾಂ ಪ್ರತಿ ಕೆ.ಜಿ ಬೀಜಕ್ಕೆ ಲೇಪನ ಮಾಡಿಯೂ ಬಿತ್ತನೆ ಮಾಡಬಹುದು ಎಂದು ರೈತರಿಗೆ ತಿಳಿಸಿದರು.

ಈ ವೇಳೆ ಪ್ರಗತಿಪರ ರೈತರಾದ ಬಾಪುಗೌಡ ಭರಮಗೌಡರ, ಶಿವಯ್ಯ ಮಠಪತಿ, ರಾಜನಗೌಡರ ಅಜ್ಜನಗೌಡರ, ಯಲ್ಲಪ್ಪ ಹಟ್ಟಿ, ಬಿ ಎನ್ ನೀಲಗುಂದ, ಗ್ರಾ ಪಂ ಸದಸ್ಯರಾದ ಶಿವಯೋಗಿ ಹೊಸಕೇರಿ, ಎಸ್ ಎಸ್ ನಿಂಗನಗೌಡರ, ಹೆಚ್ ಆರ್ ದೊಡ್ಡಗೌಡರ, ಮಾನೋಜಿ, ಇಲಾಖೆಯ ಅಧಿಕಾರಿಗಳಾದ ಎಮ್ ಎಮ್ ನಧಾಫ್, ಫಕ್ಕೀರಗೌಡ ಸಾತಪ್ಪನವರ ಹಾಗೂ ಗ್ರಾಮದ ರೈತರು ಉಪಸ್ಥಿತರಿದ್ದರು.

# ರಾಜ್ಯ ಮಟ್ಟದ ಯೋಗಾಸನ ಕ್ರೀಡಾ ಚಾಂಪಿಯನ್‌ಶಿಪ್ ಸ್ಪರ್ಧೆ-2023

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಅಮೆಚೂರ್ ಯೋಗ ಕ್ರೀಡಾ ಸಂಸ್ಥೆ(ರಿ) ಬೆಂಗಳೂರು ಇವರು ವಿಜಯಪೂರ ಜ್ಞಾನಯೋಗಾಶ್ರಮದ ಬ್ರಹ್ಮಲೀನ ಪೂಜ್ಯಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರ ದಿವ್ಯ ಪ್ರಕಾಶದಲ್ಲಿ ಡಾ. ನಾಗೂರ ಆಯುರ್ವೇದಿಕ್ ಮೆಡಿಕಲ್ ಕಾಲೇಜು ವಿಜಯಪೂರ ಇವರ ಸಹಯೋಗದೊಂದಿಗೆ 'ಕರ್ನಾಟಕ ರಾಜ್ಯ ಯೋಗಾಸನ ಕ್ರೀಡಾ ಚಾಂಪಿಯನ್‌ಶಿಪ್' ಸ್ಪರ್ಧೆಗಳನ್ನು ಆಯೋಜಿಸಿದ್ದಾರೆ.

ಸ್ಪರ್ಧೆಗಳು ಜುಲೈ 29, 30ರಂದು ಸುಶೀಲಾದೇವಿ ನಾಗೂರ ಕಾಲೋನಿ, ಶಿವಾಲಯ ಗಾರ್ಡನ್‌ನ ಡಾ. ನಾಗೂರ ಆಸ್ಪತ್ರೆ ಕ್ಯಾಂಪಸ್ ವಿಜಯಪುರ ಇಲ್ಲಿ ನಡೆಯಲಿದೆ.

ಸ್ಪರ್ಧಿಗಳ ವಯೋಮಿತಿ ಆಧಾರದ ಮೇರೆಗೆ ಸಬ್‌ಜ್ಯೂನಿಯರ್, ಜ್ಯೂನಿಯರ್ ಮತ್ತು ಸಿನಿಯರ್ ಎಂದು 3 ವಿಭಾಗಗಳಲ್ಲಿ ಸ್ತ್ರೀ-ಪುರುಷರಿಗೆ ಪ್ರತ್ಯೇಕವಾಗಿ ಒಟ್ಟು 9 ತಂಡಗಳಲ್ಲಿ ಸ್ಪರ್ಧೆಗಳು ನಡೆಯುವವು. ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಪಾರಿತೋಷಕ, ಮೆರಿಟ್ ಸರ್ಟಿಫಿಕೇಟ್ ಹಾಗೂ ಭಾಗವಹಿಸಿದ ಎಲ್ಲರಿಗೂ ಪ್ರಮಾಣಪತ್ರ ನೀಡಲಾಗುವುದು.

ಸ್ಪರ್ಧೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳು ಸ್ಪರ್ಧೆಯ ಪಠ್ಯಕ್ರಮದಲ್ಲಿ ತಿಳಿಸಿದ ಒಟ್ಟು 10 ಆಸನಗಳನ್ನು ಸ್ಪರ್ಧೆ ವೇಳೆಯಲ್ಲಿ ಪ್ರದರ್ಶಿಸಬೇಕು. ಸ್ಪರ್ಧೆಗಳಲ್ಲಿ ಭಾಗವಹಿಸುವವರು ಆನ್‌ಲೈನ್‌ನಲ್ಲಿ ಜುಲೈ 20ರೊಳಗೆ ಗೂಗಲ್ ಲಿಂಕ್ (https://forms.gle/12wqsAAz4jR7Cii9) ಮೂಲಕ ಹೆಸರು ನೋಂದಾಯಿಸಿಕೊಳ್ಳಬೇಕು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 9880948764, 9844442701, 9448317188 ಮೂಲಕ ಸಂಪರ್ಕಿಸಬೇಕೆಂದು ಗದಗ ಜಿಲ್ಲಾ ಅಮೆಚೂರ್ ಯೋಗಾಸನ ಕ್ರೀಡಾ ಸಂಸ್ಥೆಯ ಅಧ್ಯಕ್ಷ ಕೆ ಎಸ್ ಪಲ್ಲೇದ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೊಡಗಿನಾದ್ಯಂತ ಮಳೆಯ ಆರ್ಭಟ: ಶಾಲೆ-ಕಾಲೇಜುಗಳಿಗೆ ಇಂದು ರಜೆ ಘೋಷಣೆ

■ವಿಜಯಸಾಕ್ಷಿ ಸುದ್ದಿ, ಮಡಿಕೇರಿ

ಕೊಡಗಿನಾದ್ಯಂತ ಮಳೆಯ ಆರ್ಭಟ ಜೋರಾಗಿದ್ದು, ಬುಧವಾರ ಮತ್ತು ಗುರುವಾರ ಧಾರಾಕಾರವಾಗಿ ಸುರಿದ ಮಳೆಯಿಂದಾಗಿ ಕಾವೇರಿ ನದಿಯ ಜಲಾನಯನ ಪ್ರದೇಶಗಳು ಕ್ರಮೇಣ ಭರ್ತಿಯಾಗುತ್ತಿವೆ. ಆದಾಗ್ಯೂ, ವಿದ್ಯುತ್ ತಂತಿಗಳು ಹಾನಿಗೊಳಗಾದ ಕಾರಣ ಜಿಲ್ಲೆಯ ಹಲವು ಒಳ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ವರದಿಯಾಗಿದೆ.

ನಗರದಲ್ಲಿ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಮಡಿಕೇರಿಯ ಅಬ್ಬಿ ಜಲಪಾತವು ಪೂರ್ಣ ವೈಭವದಿಂದ (ದಪ್ಪ ಕೆಸರಿನ ಜೊತೆಗೆ) ಹರಿಯುತ್ತಿದೆ. ಮಡಿಕೇರಿಯಲ್ಲಿ ಕಳೆದ 24 ಗಂಟೆಗಳಲ್ಲಿ 54.20 ಮಿಮೀ ಮಳೆ ದಾಖಲಾಗಿದೆ. ಕಳೆದ 24 ಗಂಟೆಗಳಲ್ಲಿ ದೇಗುಲ ಪಟ್ಟಣದಲ್ಲಿ 120 ಮಿ.ಮೀ ಮಳೆ ದಾಖಲಾಗಿರುವುದರಿಂದ ಭಾಗಮಂಡಲದ ಕಾವೇರಿ ನದಿಗೆ ಅಡ್ಡಲಾಗಿ ನೀರಿನ ಮಟ್ಟ ಕ್ರಮೇಣ ಹೆಚ್ಚುತ್ತಿದೆ. ಕುಶಾಲನಗರದಲ್ಲಿ 18.6 ಮಿಮೀ ಮಳೆಯಾದ ನಂತರ ಕಾವೇರಿ ನದಿಯು ಶುಷ್ಕ ಸ್ಥಿತಿಯಲ್ಲಿದೆ.

ಹಲವಾರು ಜಲಪಾತಗಳು ಧುಮ್ಮಿಕ್ಕಿ ಹರಿಯುತ್ತಿದ್ದರೂ ಭಾಗಮಂಡಲದ ಬಳಿಯ ಕರಿಕೆಯಲ್ಲಿ ಸಾಧಾರಣ ಮಳೆಯಾಗಿದೆ.

# ತನ್ನಿಬ್ಬರು ಮಕ್ಕಳೊಂದಿಗೆ ಬಾವಿಗೆ ಹಾರಿ ಆಟೋ ಚಾಲಕ ಆತ್ಮಹತ್ಯೆ!

■ವಿಜಯಸಾಕ್ಷಿ ಸುದ್ದಿ, ಬೀದರ್

ತನ್ನ ಇಬ್ಬರು ಪುಟ್ಟ ಮಕ್ಕಳೊಂದಿಗೆ ಆಟೋ ಚಾಲಕನೊಬ್ಬ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಬೀದರ್ ನಲ್ಲಿ ನಡೆದಿದೆ.

ಹುಮನಾಬಾದ್ ತಾಲೂಕಿನ ಧುಮ್ಮನಸೂರ್ ಗ್ರಾಮದಲ್ಲಿ ಈ ಘಟನೆ ನಡೆದಿದ್ದು ಮೃತರನ್ನು 28 ವರ್ಷದ ಅಂಕುಶ್ ಹುಚ್ಚೇನೂರ್ ಅವರ ಮಕ್ಕಳಾದ 6 ವರ್ಷದ ತನು ಹಾಗೂ 5 ವರ್ಷದ ಸಾಯಿರಾಜ್ ಎಂದು ಗುರುತಿಸಲಾಗಿದೆ. ಕೌಟುಂಬಿಕ ಕಲಹವೇ ಈ ಘಟನೆಗೆ ಕಾರಣ ಎಂದು ಹೇಳಲಾಗುತ್ತಿದ್ದು ಹುಮನಾಬಾದ್ ಪೊಲೀಸರು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅಗ್ನಿಶಾಮಕ ಸಿಬ್ಬಂದಿ ಮೃತದೇಹಗಳನ್ನು ಮೇಲೆತ್ತಿದ್ದಾರೆ.

**ಲಯನ್ಸ್ ಕ್ಲಬ್‌ನ ಅಧಿಕಾರ ಹಸ್ತಾಂತರ ಕಾರ್ಯಕ್ರಮದಲ್ಲಿ ಜಾಯ್‌ಮೋಲ್ ನಾಯಕ್ ಅಭಿಮತ**

# ಸಮಾಜ ಸೇವೆಯಿಂದಲೇ ಆತ್ಮತೃಪ್ತಿ

■ವಿಜಯಸಾಕ್ಷಿ ಸುದ್ದಿ, ಗದಗ

ಅಂತಾರಾಷ್ಟ್ರೀಯ ಸೇವಾ ಸಂಘಟನೆಯಾದ ಲಯನ್ಸ್ ಕ್ಲಬ್‌ನ ಪದಾಧಿಕಾರಿಗಳು, ಸದಸ್ಯರು ಜನಸೇವೆ, ಸಮಾಜಸೇವೆಯ ಮುಖ್ಯ ಉದ್ದೇಶವನ್ನಿರಿಸಿಕೊಂಡು ಕಾರ್ಯ ನಿರ್ವಹಿಸಬೇಕೆಂದು ಲಯನ್ಸ್ ಕ್ಲಬ್‌ನ 317-ಬಿ ಇದರ ದ್ವಿತೀಯ ಉಪ ಜಿಲ್ಲಾ ಗವರ್ನರ್ ಜಾಯ್‌ಮೋಲ್ ನಾಯಕ್ ಹೇಳಿದರು.




ಬುಧವಾರ ನಗರದ ಲಯನ್ಸ್ ಸ್ಕೂಲ್‌ನ ಲಕ್ಷ್ಮಣರಾವ್ ಪೊತ್ನೀಸ್ ಮೆಮೋರಿಯಲ್ ಹಾಲ್‌ನಲ್ಲಿ ಏರ್ಪಡಿಸಿದ್ದ ಗದಗ-ಬೆಟಗೇರಿ ಲಯನ್ಸ್ ಕ್ಲಬ್‌ನ ನೂತನ ಪದಾಧಿಕಾರಿಗಳ ಅಧಿಕಾರ ಹಸ್ತಾಂತರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಾಮಾಜಿಕ ಸೇವಾ ಸಂಘಟನೆಗಳು ಸಾರ್ವಜನಿಕರಿಗೆ ಉಪಯುಕ್ತವಾಗುವ ಕಾರ್ಯಕ್ರಮಗಳನ್ನು ಮಾಡಿ, ಅದರಿಂದ ಆತ್ಮಸಂತೃಪ್ತಿ ಹೊಂದಬೇಕು. ಲಯನ್ಸ್ ಕ್ಲಬ್ ಸಾಮಾಜಿಕ, ಶೈಕ್ಷಣಿಕ ಕಾರ್ಯಕ್ರಮಗಳೊಂದಿಗೆ ಉಚಿತ ಆರೋಗ್ಯ ಶಿಬಿರ, ನೇತ್ರದಾನ, ರಕ್ತದಾನ, ಪರಿಸರ ಸಂರಕ್ಷಣೆ ಹೀಗೆ ಸಮಾಜಮುಖಿಯಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಸಲಹೆ ನೀಡಿದರಲ್ಲದೆ, ಕ್ಲಬ್‌ಗೆ ಸೇರುವದು ಪರಸ್ಪರ ಪರಿಚಯ, ಸ್ನೇಹ, ಸೇವೆಗಾಗಿ. ಈ ಸೇವೆಯಿಂದ ಮನುಷ್ಯನಿಗೆ ಆತ್ಮತೃಪ್ತಿಯೊಂದಿಗೆ ಜ್ಞಾನ ಬೆಳೆಯುವದು ಎಂದರು.

ಮುಖ್ಯ ಅತಿಥಿ, ಕ್ಲಬ್‌ನ ಮಾಜಿ ಗವರ್ನರ್ ಆನಂದ ಪೋತ್ನೀಸ್ ಮಾತನಾಡಿ, ಗದಗ-ಬೆಟಗೇರಿ ಅವಳಿ ನಗರದಲ್ಲಿ ಕ್ಲಬ್ ಕ್ರಿಯಾಶೀಲತೆಯಿಂದ ಕಾರ್ಯ ಮಾಡಿಕೊಂಡು ಬಂದಿದೆ.

> ಅಧ್ಯಕ್ಷರಾಗಿ ರಮೇಶ ಶಿಗ್ಲಿ, ಉಪಾಧ್ಯಕ್ಷರಾಗಿ ಡಾ. ನವೀನ ಹಿರೇಗೌಡರ, ನಿತೀಶ್ ಸಾಲಿ, ರಾಜು ವೇರ್ಣೆಕರ, ನಿಕಟಪೂರ್ವ ಅಧ್ಯಕ್ಷರಾಗಿ ವೆಂಕಟೇಶ ಬಾಂಢಗೆ, ಕಾರ್ಯದರ್ಶಿಯಾಗಿ ಪ್ರವೀಣ ವಾರಕರ, ಜಂಟಿ ಕಾರ್ಯದರ್ಶಿಯಾಗಿ ಡಾ. ತುಕಾರಾಮ ಸೂರಿ, ಖಜಾಂಚಿಯಾಗಿ ರಾಜಣ್ಣ ಮಲ್ಲಾಡದ, ಜಂಟಿ ಖಜಾಂಚಿಯಾಗಿ ರೇಣುಕಪ್ರಸಾದ ಹಿರೇಮಠ, ಲಯನ್ಸ್ ಲೇಡಿಸ್ ವಿಂಗ್ ಅಧ್ಯಕ್ಷರಾಗಿ ಸಾವಿತ್ರಿ ಶಿಗ್ಲಿ, ಕಾರ್ಯದರ್ಶಿಯಾಗಿ ಅಮೃತಾ ವಾರಕರ, ಖಜಾಂಚಿಯಾಗಿ ಸುರೇಖಾ ಮಲ್ಲಾಡದ ಅಧಿಕಾರ ವಹಿಸಿಕೊಂಡರು. ಜಾಯ್‌ಮೋಲ್ ನಾಯಕ್ ಅಧಿಕಾರ ಹಸ್ತಾಂತರಿಸಿ ಅಧಿಕಾರ ಗೌಪ್ಯತೆ ಕಾಯ್ದುಕೊಂಡು ಜನಪರ ಕಾರ್ಯ ಮಾಡಿ ಎಂದು ಸೂಚಿಸಿದರು.

ನೂತನವಾಗಿ ಅಧಿಕಾರ ವಹಿಸಿಕೊಂಡ ಪದಾಧಿಕಾರಿಗಳು ಹಾಗೂ ಸದಸ್ಯರು ಒಟ್ಟುಗೂಡಿ ಜನಮುಖಿ ಹಾಗೂ ಸಮಾಜಮುಖಿ ಕಾರ್ಯಗಳನ್ನು ಮಾಡಲಿ ಎಂದರು.

ಕ್ಲಬ್‌ನ ನಿಕಟಪೂರ್ವ ಅಧ್ಯಕ್ಷ ವೆಂಕಟೇಶ ಬಾಂಢಗೆ, ನಿಕಟಪೂರ್ವ ಕಾರ್ಯದರ್ಶಿ ನಿತೀಶ್ ಸಾಲಿ ಅವರು ತಮ್ಮ ಅಧಿಕಾರಾವಧಿಯಲ್ಲಿ ಮಾಡಿದ ಕಾರ್ಯಯೋಜನೆಗಳನ್ನು ವಿವರಿಸಿದರು.

ಡಾ. ಶ್ರೀಧರ ಕುರಡಗಿ ಸ್ವಾಗತಿಸಿದರು. ಶಿವಪ್ರಭು ನೀಲಗುಂದ ಪರಿಚಯಿಸಿದರು. ರವೀಂದ್ರ ಶಿವಪ್ಪಗೌಡ್ರ ಹಾಗೂ ಪೂಜಾ ಪಾಟೀಲ ನಿರೂಪಿಸಿದರು. ಕಾರ್ಯದರ್ಶಿ ಪ್ರವೀಣ ವಾರಕರ ವಂದಿಸಿದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka